# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

**ದಿನಾಂಕ: 06.08.2026 ರಂದು ಮಧ್ಯಾಹ್ನ 3:30 ಗಂಟೆಗೆ** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 41ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿ.

| **ಉಪಸ್ಥಿತ ಶೈಕ್ಷಣಿಕ ಮಂಡಳಿ ಸದಸ್ಯರು** | |
|---|---|
| **ಪ್ರೊ. ಎ.ಪಿ. ಜ್ಞಾನಪ್ರಕಾಶ್**<br>ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. | **ಪ್ರೊ. ನವೀನ್ ಕುಮಾರ್ ಎಸ್.ಕೆ**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ<br>ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. |
| **ಪ್ರೊ. ಎಂ. ರಾಮನಾಥಂ ನಾಯುಡು**<br>ಡೀನ್ (ಶೈಕ್ಷಣಿಕ),<br>ಮತ್ತು ಸ್ಕೂಲ್ ನಿರ್ದೇಶಕರು, ಭಾಷ ನಿಕಾಯ,<br>ಕರಾಮುವಿ, ಮೈಸೂರು. | **ಪ್ರೊ. ಸಿ.ಎಸ್. ಆನಂದಕುಮಾರ್**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು. |
| **ಪ್ರೊ. ನಿರಂಜನ್ ರಾಜ್ ಎಸ್**<br>ಹಣಕಾಸು ಅಧಿಕಾರಿಗಳು (ಕಾ/ಭಾ)<br>ಹಾಗೂ ಸ್ಕೂಲ್ ನಿರ್ದೇಶಕರು ಶಿಕ್ಷಣ ನಿಕಾಯ<br>ಮತ್ತು ನಿರ್ದೇಶಕರು, CIQA | **ಡಾ. ಎನ್. ಆನಂದಗೌಡ**<br>ಡೀನ್ (ಅಧ್ಯಯನ ಕೇಂದ್ರಗಳು)<br>ಕರಾಮುವಿ, ಮೈಸೂರು. |
| **ಡಾ. ಪ್ರಕಾಶ**<br>ಗ್ರಂಥಪಾಲಕರು ಮತ್ತು ಸದಸ್ಯರು ಶೈಕ್ಷಣಿಕ<br>ಮಂಡಳಿ, ಕರಾಮುವಿ, ಮೈಸೂರು. | |
| **ಸ್ಕೂಲ್ ನಿರ್ದೇಶಕರು** | |
| **ಪ್ರೊ. ಎನ್.ಜಿ. ರಾಜು** | ವಿಜ್ಞಾನ ನಿಕಾಯ |
| **ಪ್ರೊ. ಶಂಕರನಾರಣಪ್ಪ** | ಸಮಾಜ ವಿಜ್ಞಾನ ನಿಕಾಯ |
| | |
| **ಶ್ರೀಮತಿ ಸುನಿತ** | ನಿರ್ದೇಶಕರು, ಸಿ.ಓ.ಇ. |
| **ಗೈರು ಹಾಜರಿ** | |
| **ಪ್ರೊ. ಸಿ. ಮಹದೇವಮೂರ್ತಿ** | ನಿರ್ವಹಣಾಶಾಸ್ತ್ರ ನಿಕಾಯ |

ಡೀನ್ (ಶೈಕ್ಷಣಿಕ) ರವರು ಶೈಕ್ಷಣಿಕ ಮಂಡಳಿ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಮತ್ತು ಶೈಕ್ಷಣಿಕ ಮಂಡಳಿ ಸದಸ್ಯರು ಹಾಗೂ ಸ್ಕೂಲ್ ನಿರ್ದೇಶಕರುಗಳನ್ನು 41ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಸ್ವಾಗತಿಸಿ, ಈ ಹಿಂದಿನ ಮಾನ್ಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ರವರು ತಮ್ಮ ಅಧ್ಯಕ್ಷತೆಯಲ್ಲಿ ಸುಸೂತ್ರವಾಗಿ ಶೈಕ್ಷಣಿಕ ಮಂಡಳಿ ಸಭೆಗಳನ್ನು ನಡೆಸಿಕೊಟ್ಟಿದ್ದು ಅವರಿಗೂ ಸಹ ಧನ್ಯವಾದಗಳನ್ನು ತಿಳಿಸಿದರು.

ಕುಲಸಚಿವರು　　　　　　　　ಕುಲಪತಿಗಳು

ಮಾನ್ಯ ಕುಲಪತಿಗಳು ಮಾತನಾಡಿ ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಗಳಿಗೆ ಎಲ್ಲಾ ವಿಭಾಗಗಳಿಂದ ಕಾಲಮಿತಿಯೊಳಗೆ ವಿಷಯಗಳನ್ನು ಸಲ್ಲಿಸುವಂತೆ ಸೂಚಿಸಿದರು. ಮುಂದುವರೆದು, ತುರ್ತು ಮತ್ತು ಅನಿವಾರ್ಯ ಸಮಯಗಳಲ್ಲಷ್ಟೆ ಟೇಬಲ್ ಅಜೆಂಡ ಮಂಡಿಸಬೇಕು ಎಂದು ಸೂಚಿಸಿ ಈ ಬಗ್ಗೆ ಸುತ್ತೋಲೆ ಹೊರಡಿಸುವಂತೆ ತಿಳಿಸಿದರು.

ಮುಂದುವರೆದು, ಮಾನ್ಯ ಕುಲಪತಿಗಳ ಸೂಚನೆಯಂತೆ ಡೀನ್ (ಶೈಕ್ಷಣಿಕ) ರವರು 41ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿತವಾಗಿರುವ ವಿಷಯಗಳನ್ನು ಕ್ರಮವಾಗಿ ಸಭೆಗೆ ಮಂಡಿಸಿದರು.

**ವಿಷಯ ಸಂಖ್ಯೆ: 41.01**

**ವಿಷಯ:** MBA 3 ಮತ್ತು 4ನೇ ಸೆಮಿಸ್ಟರ್ ನ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿ Specialization ಮುದ್ರಿಸುವ ಕುರಿತು.

**********

MBA ವಿದ್ಯಾರ್ಥಿಗಳ Marks Card ನಲ್ಲಿ Specialization ವಿಷಯವನ್ನು ಮುದ್ರಿಸುವುದರ ಸಂಬಂಧ ದಿನಾಂಕ: 09-02-2026ರಲ್ಲಿ PG-BOS ನಲ್ಲಿ ಚರ್ಚಿಸಿ Marks card Template ಗಳನ್ನು ಸಿದ್ದಪಡಿಸಿ ಅನುಮೋದನೆ ಪಡೆಯಲಾಗಿದೆ. ಸಿದ್ಧಪಡಿಸಿರುವ Templateಗಳನ್ನು ಹಾಗೂ BOS ನಡಾವಳಿಯನ್ನು ಲಗತ್ತಿಸಿದೆ, ಸದರಿ ವಿಷಯವನ್ನು ಮಾನ್ಯ ಕುಲಸಚಿವ ಪರೀಕ್ಷಾಂಗರವರ ಸೂಚನೆಯಂತೆ ಮುಂಬರುವ AC ಯಲ್ಲಿ ಅನುಮೋದನೆ ಪಡೆಯಲು ಮಂಡಿಸಲಾಗಿದೆ.

**ಚರ್ಚೆ:**

ಮಾನ್ಯ ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ ಎಂ.ಬಿ.ಎ. ವಿದ್ಯಾರ್ಥಿಗಳು ತಮ್ಮ 3 ಮತ್ತು 4ನೇ ಸೆಮಿಸ್ಟರ್‌ನ ಅಂಕಪಟ್ಟಿಯಲ್ಲಿ Specilization ಅನ್ನು ನಮೂದಿಸಿ ನೀಡುವಂತೆ ವಿಭಾಗದ ಅಧ್ಯಕ್ಷರನ್ನು ಕೋರಿದ್ದು, ಈ ಹಿನ್ನೆಲೆಯಲ್ಲಿ ವಿಭಾಗದಲ್ಲಿ ನಡೆಸಲಾಗಿರುವ ಬಿ.ಓ.ಎಸ್ ಸಭೆಯಲ್ಲಿ ವಿಷಯ ಮಂಡಿಸಿ 3 ಮತ್ತು 4ನೇ ಸೆಮಿಸ್ಟರ್‌ನ ಅಂಕಪಟ್ಟಿಯಲ್ಲಿ Specilization ಅನ್ನು ನಮೂದಿಸುವ ಬಗ್ಗೆ ತೀರ್ಮಾನ ಕೈಗೊಂಡಿದ್ದು, ಈ ಸಂಬಂಧವಾಗಿ ಸೂಕ್ತ ನಿರ್ಣಯಕೈಗೊಳಬೇಕಿರುತ್ತದೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ರೀತಿ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲಿ Specilization ಅನ್ನು ನಮೂದಿಸಿದಲ್ಲಿ ಭವಿಷ್ಯದಲ್ಲಿ ವಿದ್ಯಾರ್ಥಿಗಳು ನಿಗಧಿತ ವ್ಯಾಪ್ತಿ / Field ನಲ್ಲೆ ಹೋಗಬೇಕಾಗುತ್ತದೆ ಇದರಿಂದ ಬೇರೆ ಬೇರೆ ರೀತಿಯ ಗೊಂದಲ / ಸಮಸ್ಯೆಗಳು ಉಂಟಾಗಬಹುದಾಗಿರುವುದರಿಂದ Specilization ಅನ್ನು ನಮೂದಿಸಿ ಅಂಕಪಟ್ಟಿಯನ್ನು ನೀಡುವುದು ಸೂಕ್ತವಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮಾನ್ಯ ಕುಲಪತಿಗಳ ಅಭಿಪ್ರಾಯಕ್ಕೆ ಎಲ್ಲಾ ಸದಸ್ಯರು ಸಮ್ಮತಿ ಸೂಚಿಸಿ ಅಂಕಪಟ್ಟಿಯಲ್ಲಿ Specilization ಅನ್ನು ನಮೂದಿಸದಿರುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ತೀರ್ಮಾನ: ಅಂಕಪಟ್ಟಿಯಲ್ಲಿ Specilization ಅನ್ನು ನಮೂದಿಸುವುದರಿಂದ ಆಗಬಹುದಾದ ಸಾಧಕ ಮತ್ತು ಬಾಧಕಗಳ ಬಗ್ಗೆ ಮತ್ತೊಮ್ಮೆ ವಿವರವಾಗಿ ಪರಿಶೀಲಿಸಿ ಮುಂದಿನ ಸಭೆಗೆ ವಿಷಯ ಮಂಡಿಸುವಂತೆ ತಿಳಿಸಿ ವಿಷಯವನ್ನು Defer ಮಾಡಲಾಯಿತು.**

******

ಕುಲಸಚಿವರು

ಕುಲಪತಿಗಳು

ವಿಷಯ ಸಂಖ್ಯೆ: 41.02

ವಿಷಯ: ವಿಶ್ವವಿದ್ಯಾನಿಲಯದ CBCS ಸ್ನಾತಕ ಪದವಿ ಕಾರ್ಯಕ್ರಮಗಳಲ್ಲಿ Additional Mandatory Course ಗಳಾದ Indian Constitution & Human Rights ಮತ್ತು Environmental Science ವಿಷಯಗಳಿಗೆ ಸಂಬಂಧಿಸಿದಂತೆ ಸೆಮಿಸ್ಟರ್ ಅಂಕಪಟ್ಟಿಯಲ್ಲಿ SGPA ಹಾಗೂ ಅಂತಿಮ ಸೆಮಿಸ್ಟರ್ ಅಂಕಪಟ್ಟಿಯಲ್ಲಿ CGPA ನಮೂದಿಸುವ ಬಗೆಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:12–06–2026ರಂದು ಚರ್ಚಿಸಿದ ನಡಾವಳಿಯಲ್ಲಿ "CBCS ಸ್ನಾತಕ ಪದವಿ" ಕಾರ್ಯಕ್ರಮಗಳಲ್ಲಿ **"2021–22 ಸಿ.ಬಿ.ಸಿ.ಎಸ್ ಸ್ನಾತಕ ಆಧ್ಯಾದೇಶ**"ದ ಪ್ರಕಾರ **"**Additional Mandatory Course"ಗಳಾದ **"**Indian Constitution & Human Rights" ಮತ್ತು "Environmental Science"ಈ ಎರಡು ವಿಷಯಗಳ Credits ಮತ್ತು Credit Points ಗಳನ್ನು ಅಂತಿಮ ಸೆಮಿಸ್ಟರ್‌ನ CGPA ದರ್ಜೆ ಘೋಷಣೆಯ ಸಂದರ್ಭದಲ್ಲಿ ಪರಿಗಣಿನೆಗೆ ತೆಗೆದುಕೊಂಡು CGPA ದರ್ಜೆ ಘೋಷಿಸುವ ಸಂಬಂಧ ಹಾಗೂ ಮುಂದುವರಿದಂತೆ OCT/NOV-2025ರ B.Sc-Hon's(Information Technology) ವಿದ್ಯಾರ್ಥಿಗಳಿಗೆ ಈಗಾಗಲೇ ರವಾನೆಯಾಗಿರುವ ಅಂತಿಮ ಸೆಮಿಸ್ಟರ್(CGPA) ಅಂಕಪಟ್ಟಿಗಳಲ್ಲಿ ಯಾವುದೇ ಬದಲಾವಣೆ ಮಾಡದೆ, ಅಂತಿಮ ಸೆಮಿಸ್ಟರ್ ಅಂಕಪಟ್ಟಿಯಲ್ಲಿ CGPA ದರ್ಜೆ ಘೋಷಿಸಿ, ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ವಿತರಿಸಲು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ತೀರ್ಮಾನಿಸಿದ ನಡಾವಳಿಯನ್ನು ಶೈಕಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ಚರ್ಚೆ:**

ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯದ CBCS ಸ್ನಾತಕ ಪದವಿ ಕಾರ್ಯಕ್ರಮಗಳಲ್ಲಿ Additional Mandatory Course ಗಳಾದ Indian Constitution & Human Rights ಮತ್ತು Environmental Science ವಿಷಯಗಳಿಗೆ ಸಂಬಂಧಿಸಿದಂತೆ ಸೆಮಿಸ್ಟರ್ ಅಂಕಪಟ್ಟಿಯಲ್ಲಿ SGPA ಹಾಗೂ ಅಂತಿಮ ಸೆಮಿಸ್ಟರ್ ಅಂಕಪಟ್ಟಿಯಲ್ಲಿ CGPA ನಮೂದಿಸುವ ಸಂಬಂಧದಲ್ಲಿ ಯು.ಜಿ.ಸಿ. ನಿಯಮಾವಳಿಗಳಲ್ಲಿ ಅವಕಾಶ ನೀಡಲಾಗಿದೆಯೇ ಎಂಬುದರ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿದರು.

ಮಾನ್ಯ ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ ವಿಶ್ವವಿದ್ಯಾನಿಲಯದ ಆಧ್ಯಾದೇಶದ ಪ್ರಕಾರ ಅವಕಾಶ ಇರುವುದಿಲ್ಲ ಎಂದು ತಿಳಿಸಿದರು. ಮುಂದುವರೆದು, ಬಿ.ಎಸ್ಸಿ. ಐ.ಟಿ. ವಿದ್ಯಾರ್ಥಿಗಳಿಗೆ ಈ CGPA ನಮೂದಿಸಿ ಅಂಕಪಟ್ಟಿ ವಿತರಿಸಲಾಗಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಈ ಬಗ್ಗೆ ವಿವರವಾಗಿ ಸಭೆಯಲ್ಲಿ ಚರ್ಚಿಸಿ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಯಿತು.

**ತೀರ್ಮಾನ: ಈಗಾಗಲೇ ಬಿ.ಎಸ್ಸಿ. ಐ.ಟಿ. ವಿದ್ಯಾರ್ಥಿಗಳಿಗೆ CGPA ನಮೂದಿಸಿ ವಿತರಿಸಲಾಗಿರುವ ಅಂಕಪಟ್ಟಿಯನ್ನು ಹಿಂಪಡೆದು CGPA ನಲ್ಲಿ** Indian Constitution & Human Rights ಮತ್ತು Environmental Science ನ **Credit Points ಅನ್ನು ಕಳೆದು ಹೊಸದಾಗಿ ಪರಿಷ್ಕೃತ ಅಂಕಪಟ್ಟಿಯನ್ನು ನೀಡುವುದು ಮತ್ತು ವಿಶ್ವವಿದ್ಯಾನಿಲಯದ CBCS ಸ್ನಾತಕ ಪದವಿ ಕಾರ್ಯಕ್ರಮಗಳಲ್ಲಿ Additional Mandatory Course ಗಳಾದ Indian Constitution & Human Rights ಮತ್ತು Environmental Science ವಿಷಯಗಳ Credit Points ಅನ್ನು ಇತರ ವಿಶ್ವವಿದ್ಯಾನಿಲಯಗಳಂತೆ CGPA, SGPA ನಮೂದಿಸುವ ಸಂದರ್ಭದಲ್ಲಿ ಪರಿಗಣಿಸದಂತೆ ತೀರ್ಮಾನಿಸಲಾಯಿತು.**

******

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 41.03**

**ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸಿರುವ ಸಂಬಂಧ ಅನುಸಮರ್ಥನೆಗಾಗಿ.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಯ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಹಾಗೂ ವಿವಿನಿಲಯದ ಪರಿನಿಯಮ IIರ ಅನುಚ್ಛೇಧದಂತೆ 3 ವರ್ಷಗಳ ಅವಧಿ ಅಥವಾ ಮುಂದಿನ ಆದೇಶದವರೆಗೆ ಅಧ್ಯಯನ ಮಂಡಳಿಯನ್ನು ಪುನರ್ ರಚಿಸಿ (ಪ್ರತಿ ಲಗತ್ತಿಸಿದೆ) ಆದೇಶ ಹೊರಡಿಸಲಾಗಿರುವ ಕ್ರಮಕ್ಕೆ ಮಾನ್ಯ ಶೈಕ್ಷಣಿಕ ಮಂಡಳಿ ಸಭೆಯ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

1. ನಾಡ ಪ್ರಭು ಕೆಂಪೇಗೌಡ ಅಧ್ಯಯನ ಮತ್ತು ವಿಸ್ತರಣಾ ಕೇಂದ್ರ
2. ಗಣಕ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ(ಯುಜಿ ಮತ್ತು ಪಿಜಿ)
3. ಗಣಿತಶಾಸ್ತ್ರ ಅಧ್ಯಯನ ವಿಭಾಗ(ಯುಜಿ)
4. ಭೌತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ(ಯುಜಿ ಮತ್ತು ಪಿಜಿ ಸಂಯೋಜಿತ)
5. ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ(ಪಿಜಿ)
6. ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ(ಸಂಯುಕ್ತ)
7. ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ(ಯುಜಿ)
8. ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ(ಪಿಜಿ)
9. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ(ಪಿಜಿ)
10. ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ(ಯುಜಿ)
11. ಉರ್ದು ಅಧ್ಯಯನ ಮತ್ತು ಸಂಶೋಧನಾ ವಿಭಾಗ(ಸಂಯುಕ್ತ)
12. ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ(ಯುಜಿ)
13. ಜೀವವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ(ಪಿಜಿ)

**ತೀರ್ಮಾನ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸಿರುವ ಪ್ರಕ್ರಿಯೆಗೆ ಅನುಸಮರ್ಥನೆ ನೀಡಲಾಯಿತು.**

*****

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 41.04**

**ವಿಷಯ** : ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿರುವ ಸಂಬಂಧ ಅನುಸಮರ್ಥನೆಗಾಗಿ

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎಂಬ ಧ್ಯೇಯ ವಾಕ್ಯವನ್ನು ಪಸರಿಸುವ ಸದುದ್ದೇಶದಿಂದ ರಾಜ್ಯದಾದ್ಯಂತ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಸಂಬಂಧ ದಿನಾಂಕ: 25-12-2025 ರಂದು ಪತ್ರಿಕಾ ಪ್ರಕಟಣೆ ನೀಡಿ ಕ್ರಮವಹಿಸಲಾಗಿರುತ್ತದೆ. 2025-26ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯಲ್ಲಿ ಹೊಸದಾಗಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶದಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಈ ಸಂಬಂಧ ಕಲಿಕಾರ್ಥಿ ಸಹಾಯ ಕೇಂದ್ರವನ್ನು ಕೋರಿ ಅರ್ಜಿ ಸಲ್ಲಿಸಿರುವ 28 ಕಾಲೇಜು/ಶಿಕ್ಷಣಸಂಸ್ಥೆಗಳಿಗೆ ಡೀನ್ ಅಧ್ಯಯನ ಕೇಂದ್ರ ಹಾಗೂ ಸಂಬಂಧಪಟ್ಟ ಪ್ರಾದೇಶಿಕ ನಿರ್ದೇಶಕರುಗಳ ನೇತೃತ್ವದಲ್ಲಿ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿರುವ ವರದಿಯನ್ನು, ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ, 'ಶಾಸನಬದ್ಧ ಅಧಿಕಾರಿಗಳ ಸಮಿತಿ' ಯನ್ನು ರಚಿಸಿ ಸಮಿತಿಯ ಶಿಫಾರಸ್ಸಿನಂತೆ ಆಡಳಿತಾತ್ಮಕ ಅನುಮೋದನೆ ಪಡೆದು ಈಗಾಗಲೇ 09 ಕಾಲೇಜು/ಶಿಕ್ಷಣಸಂಸ್ಥೆಗಳಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ.

ಮುಂದುವರೆದು, ಹಲವು ಕಲಿಕಾರ್ಥಿ ಸಹಾಯ ಕೇಂದ್ರಗಳು ಸಂಯೋಜನೆ ನವೀಕರಿಸಿಕೊಳ್ಳದ ಕಾರಣ ಆ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ಸದುದ್ದೇಶದಿಂದ, 'ಅನುಬಂಧ-ಅ' ನಲ್ಲಿ ತಿಳಿಸಿರುವ 04 ಶಿಕ್ಷಣ ಸಂಸ್ಥೆಗಳನ್ನು ಆಡಳಿತಾತ್ಮಕ ಅನುಮೋದನೆ ಪಡೆದು ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ. ಈ ಸಂಬಂಧದ ವಿಷಯವನ್ನು 41ನೇ ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

ಸದರಿ ಶಿಕ್ಷಣಸಂಸ್ಥೆಗಳ ವಿವರವನ್ನು ಅನುಬಂಧ-ಅ ನಲ್ಲಿ ಲಗತ್ತಿಸಿದೆ.

**ಚರ್ಚೆ**

ಡೀನ್ (ಅಧ್ಯಯನ ಕೇಂದ್ರ) ರವರು ಮಾತನಾಡಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಸಂಬಂಧ ಜಾಹಿರಾತನ್ನು ಹೊರಡಿಸಿ ಕ್ರಮವಹಿಸಲಾಗಿರುವುದಾಗಿ ತಿಳಿಸಿದರು.

ಪ್ರೊ. ಎನ್.ಜಿ. ರಾಜು, ರವರು ಮಾತನಾಡಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸುವ ಅಥವ ಸ್ಥಾಪಿಸಿರುವ ವಿಷಯವನ್ನು ಸಭೆಗೆ ಮಂಡಿಸುವಾಗ ಕಲಿಕಾರ್ಥಿ ಸಹಾಯ ಕೇಂದ್ರಗಳ ಹೆಸರು, ವಿಳಾಸ ಮತ್ತು ಇತ್ಯಾದಿ ಮಾಹಿತಿಗಳೊಂದಿಗೆ ಮಂಡಿಸುವಂತೆ ಚರ್ಚಿಸಲಾಗಿರುತ್ತದೆ. ಆದರೆ, ಡೀನ್ (ಅಧ್ಯಯನ ಕೇಂದ್ರ) ದಿಂದ ವಿಷಯ ಮಂಡಿಸುವಾಗ ಕೇವಲ ಕಲಿಕಾರ್ಥಿ ಸಹಾಯ ಕೇಂದ್ರಗಳ ಸಂಖ್ಯೆಗಳನಷ್ಟೆ ನಮೂದಿಸಿರುವುದು ಅಪೂರ್ಣ ಮಾಹಿತಿಯಾಗುತ್ತದೆಂದು ತಿಳಿಸಿದರು.

ಕುಲಸಚಿವರು ಕುಲಪತಿಗಳು

ಮಾನ್ಯ ಕುಲಪತಿಗಳು ಮಾತನಾಡಿ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಅನುಮತಿ ನೀಡದಿರುವ ಬಗ್ಗೆ ತೀರ್ಮಾನವಾಗಿರುತ್ತದೆ ಆದರೂ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ತೆರೆಯುವ ಅವಶ್ಯಕತೆ ಇದ್ದಲ್ಲಿ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮರು ಮಂಡಿಸಿ ಅನುಮೋದನೆ ಪಡೆಯುವುದು ಅವಶ್ಯ ಎಂದು ತಿಳಿಸಿದರು.

ಈ ಬಗ್ಗೆ ವಿವರವಾಗಿ ಸಭೆಯಲ್ಲಿ ಚರ್ಚಿಸಿ ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಯಿತು.

**ತೀರ್ಮಾನ: ಪ್ರಾದೇಶಿಕ ಕೇಂದ್ರಗಳ ವ್ಯಾಪ್ತಿಯಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿರುವ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.**

*****

## ವಿಷಯ ಸಂಖ್ಯೆ: 41.05

**ವಿಷಯ:** ಕರಾಮುವಿಯ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿರುವ ಬಗ್ಗೆ ಅನುಸಮರ್ಥನೆಗಾಗಿ.

ಉಲ್ಲೇಖ: 1. ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಡೀನ್(ಶೈ)/ಸಿಬ್ಬಂದಿ-12/ಸಿ.ನಂ:59332/3564/2026-27,ದಿನಾಂಕ:25-05-2026

2. ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಡೀನ್(ಶೈ)-14/ಸಿ.ನಂ:19753/2026-27, ದಿನಾಂಕ:08-07-2026

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಈ ಕೆಳಕಂಡ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು **ಉಲ್ಲೇಖಿತ ಆದೇಶಗಳಂತೆ ಶೈಕ್ಷಣಿಕ ಮಂಡಳಿ ಸಭೆಯನ್ನು ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೊದನೆಯಂತೆ ನೇಮಿಸಿ ಕಚೇರಿ ಆದೇಶ ಹೊರಡಿಸಲಾಗಿದೆ.** (ಆದೇಶ ಪ್ರತಿ ಲಗತ್ತಿಸಿದೆ) ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

| ಕ್ರ.ಸಂ | ಅಧ್ಯಯನ ವಿಭಾಗಗಳ ವಿವರ | ಮುಖ್ಯಸ್ಥರ ವಿವರ |
|---|---|---|
| 01 | **ಗಣಕವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗ** | **ಶ್ರೀಮತಿ ಸುನೀತ, ಸಹ ಪ್ರಾಧ್ಯಾಪಕರು, ದಿನಾಂಕ:15-05-2026 ರಿಂದ 14-05-2028 ರವರೆಗೆ** |
| 02 | **ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ** | **ಪ್ರೊ. ತೇಜಸ್ವಿ ನವಿಲೂರ್, ಪ್ರಾಧ್ಯಾಪಕರು, ದಿನಾಂಕ:08-07-2026 ರಿಂದ 07-07-2028 ರವರೆಗೆ** |

**ತೀರ್ಮಾನ: ಕರಾಮುವಿಯ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಮುಖ್ಯಸ್ಥರುಗಳನ್ನು ನೇಮಕ ಮಾಡಿರುವ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.**

*****

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 41.06**

ವಿಷಯ : ಗಣಕ ವಿಜ್ಞಾನ ಅಧ್ಯಯನ ವಿಭಾಗದಿಂದ ನೂತನವಾಗಿ ಪ್ರಾರಂಭಿಸುತ್ತಿರುವ Diploma in Cyber Security ಹಾಗೂ Diploma in Artificial Intelligence Programme ಗಳನ್ನು Online Learning ಮೂಲಕವೂ ಸಹ ವಿದ್ಯಾರ್ಥಿಗಳಿಗೆ ನೀಡಲು ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ಅಧ್ಯಯನ ವಿಭಾಗದಿಂದ Diploma in Cyber Security ಹಾಗೂ Diploma in Artificial Intelligence Programme ಗಳನ್ನು ನೂತನವಾಗಿ ಪ್ರಾರಂಭಿಸಲು, ಮಾನ್ಯ ಶೈಕ್ಷಣಿಕ ಮಂಡಳಿಯ 66.11 ನೇ ಸಭೆಯಲ್ಲಿ ಅನುಮೋದನೆಯಾಗಿದ್ದು, ಸದರಿ Programme ಗಳನ್ನು ವಿಶ್ವವಿದ್ಯಾನಿಲಯದ ODL Programme ಮಾದರಿಯಂತೆ, Online Learning ಮೂಲಕ ವಿದ್ಯಾರ್ಥಿಗಳಿಗೆ ನೀಡಲು ಅನುಮೋದನೆ ಹಾಗೂ ಸದರಿ Programme ಗಳ ODL ಹಾಗೂ Online ಪ್ರವೇಶಾತಿ ಶುಲ್ಕವನ್ನು ನಿಗಧಿಪಡಿಸಲು ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಾನ್ಯ ಶೈಕ್ಷಣಿಕ ಸಮಿತಿ ಸಭೆಗೆ ವಿಷಯ ಮಂಡಿಸಿದೆ.

**ತೀರ್ಮಾನ: ಗಣಕ ವಿಜ್ಞಾನ ಅಧ್ಯಯನ ವಿಭಾಗದಿಂದ ನೂತನವಾಗಿ ಪ್ರಾರಂಭಿಸುತ್ತಿರುವ Diploma in Cyber Security ಹಾಗೂ Diploma in Artificial Intelligence Programme ಗಳನ್ನು Online Learning ಮೂಲಕವೂ ಸಹ ವಿದ್ಯಾರ್ಥಿಗಳಿಗೆ ನೀಡಲು ಅನುಮೋದನೆ ನೀಡಲಾಯಿತು. ಮುಂದುವರೆದು, ಶುಲ್ಕ ನಿಗಧಿಪಡಿಸುವ ಸಂಬಂಧ ಶುಲ್ಕ ನಿಗಧಿ ಸಮಿತಿಗೆ ವಿಷಯ ಮಂಡಿಸಿ ತೀರ್ಮಾನ ಕೈಗೊಳ್ಳಲು ತೀರ್ಮಾನಿಸಲಾಯಿತು.**

*****

**ವಿಷಯ ಸಂಖ್ಯೆ: 41.07**

**ವಿಷಯ:** ಕರಾಮುವಿಯ KSOU Programme Center/KSOU Work Center ನ ಅಡಿಯಲ್ಲಿ ಯೋಗ ವಿಜ್ಞಾನ ಸರ್ಟಿಫಿಕೇಟ್ ಕೋರ್ಸ್ ಅನ್ನು ಪ್ರಾರಂಭಿಸುವ ಬಗ್ಗೆ.

**ಉಲ್ಲೇಖ:** ಆದೇಶ ಸಂಖ್ಯೆ: ಕರಾಮುವಿ/ಡಿಎಸಿ-02/2024-25, ದಿನಾಂಕ:05-05-2025

*****

ಕರಾಮುವಿಯ ಕಲಿಕಾರ್ಥಿ ಸಹಾಯಕ ಕೇಂದ್ರ ಪರಿಣಿತ ಕಾಲೇಜುಗಳು/ಸಂಸ್ಥೆಗಳು/ಅಂತರ್ ವಿಶ್ವವಿದ್ಯಾನಿಲಯಗಳ ಶೈಕ್ಷಣಿಕ ಸಹಕಾರದೊಂದಿಗೆ ಪ್ರಚಲಿತ ವಿದ್ಯಮಾನಕ್ಕೆ/ಸಂದರ್ಭಕ್ಕೆ ತಕ್ಕಂತಹ ಸರ್ಟಿಫಿಕೇಟ್/ಡಿಪ್ಲೋಮಾ ಶಿಕ್ಷಣ ಕಾರ್ಯಕ್ರಮಗಳನ್ನು ಪಾರಂಭಿಸಲು ELSC ರ ಬದಲಾಗಿ ಉಲ್ಲೇಖಿತ ಆದೇಶದಂತೆ ರಚಿತವಾಗಿರುವ KSOU Programme Center/KSOU Work Center ನ ಯಡಿಯಲ್ಲಿ ಯೋಗ ವಿಜ್ಞಾನ ಸರ್ಟಿಫಿಕೇಟ್ ಕೋರ್ಸ್‌ನ್ನು ಪ್ರಾರಂಭಿಸುವ ಸಂಬಂಧ ದಿನಾಂಕ: 25-04-2026 ರಂದು ನಡೆದ ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನದಂತೆ ಸಾಧಕ ಬಾಧಕಗಳ ಬಗ್ಗೆ ಶಿಫಾರಸ್ಸು ಮಾಡಲು

ಕುಲಸಚಿವರು ಕುಲಪತಿಗಳು

ರಚಿಸಲಾಗಿರುವ ಸಮಿತಿ ಸಭೆಗಳನ್ನು ನಡೆಸಿ ಮತ್ತು ದಿನಾಂಕ:09-06-2026 ರಂದು ಸುಯೋಗ ಟ್ರಸ್ಟ್ ಮೈಸೂರು ರವರು ಬೇಟಿ ನೀಡಿ ಕೆಲವು ಸ್ಥಳಗಳನ್ನು ವೀಕ್ಷಿಸಿ, ಯೋಗ ವಿಜ್ಞಾನ ಸರ್ಟಿಫಿಕೇಟ್ ಕೋರ್ಸ್ ಅನ್ನು KSOU Programme Center/KSOU Work Center ನ ಯಡಿಯಲ್ಲಿ ಪ್ರಾರಂಭಿಸಬಹುದಾಗಿದೆ ಎಂಬ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಿದ್ದು, ಈ ಸಂಬಂಧ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ತೀರ್ಮಾನ: ಯೋಗ ವಿಜ್ಞಾನ ಸರ್ಟಿಫಿಕೇಟ್ ಕೋರ್ಸ್ ಅನ್ನು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಡಿಯಲ್ಲಿ ಕಾರ್ಯಕ್ರಮವನ್ನು ನಡೆಸುವುದು ಮತ್ತು ತರಗತಿಗಳನ್ನು ಬಾಹ್ಯ ತಜ್ಞರಿಂದ ಮಾಡಿಸುವುದು ಎಂದು ತೀರ್ಮಾನಿಸಲಾಯಿತು.**

*****

**ವಿಷಯ ಸಂಖ್ಯೆ: 41.08**

ವಿಷಯ: ವಿಶ್ವವಿದ್ಯಾನಿಲಯದ ವಿಜ್ಞಾನ ವಿಭಾಗಗಳಿಗೆ ಅವಶ್ಯಕವಾದ ರಸಾಯನಿಕ ಪದಾರ್ಥಗಳು ಹಾಗೂ ಪ್ರಯೋಗಾಲಯ ಸಲಕರಣೆಗಳನ್ನು ಖರೀದಿಸುವ ಸಂಬಂಧ Rate Contract ಮಾಡುವ ಬಗೆಗೆ.

*****

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ವಿಜ್ಞಾನ ವಿಭಾಗಗಳಿಗೆ ಅವಶ್ಯಕವಾದ ರಸಾಯನಿಕ ಪದಾರ್ಥಗಳು ಹಾಗೂ ಪ್ರಯೋಗಾಲಯ ಸಲಕರಣೆಗಳನ್ನು ಖರೀದಿಸುವ ಸಂಬಂಧ Rate Contract ಮಾಡುವ ಹಿನ್ನೆಲೆಯಲ್ಲಿ. ವಿಭಾಗಗಳ ಮುಖ್ಯಸ್ಥರುಗಳ ಸಭೆಯ ನಿರ್ದಾರ, ವಿವಿದ ರಸಾಯನಿಕ ಸಂಸ್ಥೆಗಳು ನೀಡಿರುವ ದರಪಟ್ಟಿಗಳ ವಿವರಗಳನ್ನು AC ಯಲ್ಲಿ ಮಂಡಿಸಲು ಮಾನ್ಯ ಕುಲಪತಿಗಳು ತಿಳಿಸಿರುವುದರಿಂದ (ದಿನಾಂಕ: 18-07-2026). Rate Contract ಕುರಿತು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ತೀರ್ಮಾನ: ವಿಶ್ವವಿದ್ಯಾನಿಲಯದ ವಿಜ್ಞಾನ ವಿಭಾಗಗಳಿಗೆ ಅವಶ್ಯಕವಾದ ರಸಾಯನಿಕ ಪದಾರ್ಥಗಳು ಹಾಗೂ ಪ್ರಯೋಗಾಲಯ ಸಲಕರಣೆಗಳನ್ನು ಖರೀದಿಸುವ ಸಂಬಂಧ Rate Contract ಮಾಡಲು ಅನುಮೋದನೆ ನೀಡಲಾಯಿತು.**

*****

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 41.09**

**ವಿಷಯ:** ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಾಪಕರುಗಳಿಗೆ ಯುಜಿಸಿ ನಿಯಮದಂತೆ ವಿಶೇಷ ಸಾಂದರ್ಭಿಕ ರಜೆ ಹಾಗೂ Duty Leave ಎಂಬ ರಜೆಗಳನ್ನು ನಿಗಧಿಪಡಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಾಪಕರುಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ನಿಯಮದಂತೆ ಹಾಗೂ KCSR ನಿಯಮದಂತೆ 30 ದಿನಗಳು ವಿಶೇಷ ಸಾಂದರ್ಭಿಕ ರಜೆ ಹಾಗೂ 15 ದಿನಗಳ ರಜೆಯನ್ನು ನಿಗಧಿಪಡಿಸಿ ಆದೇಶ ಹೊರಡಿಸಲಾಗಿತ್ತು (ಪ್ರತಿ ಲಗತ್ತಿಸಿದೆ). ಆದರೆ, ಮಾನ್ಯ ಕುಲಪತಿಗಳು ಯುಜಿಸಿಯ ನೂತನ ನಿಯಮದಂತೆ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗೆ 10 ದಿನಗಳು ವಿಶೇಷ ಸಾಂದರ್ಭಿಕ ರಜೆ ಹಾಗೂ 30 ದಿನಗಳು Duty Leave ಎಂದು ನಿಗಧಿಪಡಿಸುವಂತೆ ತಿಳಿಸಿ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ, ಈ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ: ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಅಧ್ಯಾಪಕರುಗಳಿಗೆ ಯುಜಿಸಿ ನಿಯಮದಂತೆ ವಿಶೇಷ ಸಾಂದರ್ಭಿಕ ರಜೆ ಹಾಗೂ Duty Leave ಎಂಬ ರಜೆಗಳನ್ನು ನಿಗಧಿಪಡಿಸುವ ಬಗ್ಗೆ ಅನುಮೋದನೆ ನೀಡಲಾಯಿತು.**

*****

**ವಿಷಯ ಸಂಖ್ಯೆ: 41.10**

ವಿಷಯ: PGCIT, DIT ಮತ್ತು UGCICT ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ ಕಡಿಮೆ ಇರುವ ಕೋರ್ಸ್‌ಗಳ ಬಗೆಗೆ ಮತ್ತು ಹೊಸ ಡಿಪ್ಲೋಮ ಕಾರ್ಯಕ್ರಮಗಳ ಪರಿಚಯಿಸುವ ಬಗೆಗೆ.

*****

ಮಾಹಿತಿ ತಂತ್ರಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ನಡೆಸಲಾಗುತ್ತಿರುವ ಡಿಪ್ಲೋಮಾ ಕಾರ್ಯಕ್ರಮಗಳಾದ PGCIT (Post Graduate Certificate in Information Technology), DIT (Diploma in Information Technology) ಮತ್ತು UGCICT (Under Graduate Certificate in Information Communication Technology) ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯು ಕಡಿಮೆ ಇರುವ ಹಿನ್ನಲೆಯಲ್ಲಿ ದಿನಾಂಕ: 02.05.2024 ರಂದು ನಡೆದ ಸಂಯುಕ್ತ ಅಧ್ಯಯನ ಸಭೆಯಲ್ಲಿ ವಿವರವಾಗಿ ಚರ್ಚಿಸಿ ಸದರಿ ಕೋರ್ಸ್‌ಗಳನ್ನು ರದ್ದುಗೊಳಿಸುವುದು ಎಂದು ತೀರ್ಮಾನಿಸಿ ಶಿಫಾರಸ್ಸು ಮಾಡಲಾಗಿರುತ್ತದೆ ಮತ್ತು ಹೊಸ Post Graduate Certificate in Business Analytics (PGCBA) ಕೋರ್ಸ್ ಅನ್ನು ರಚನೆ ಮಾಡಲಾಗಿರುತ್ತದೆ (ಅನುಬಂಧ–1).

ಕುಲಸಚಿವರು ಕುಲಪತಿಗಳು

ದಿನಾಂಕ 22.12.2025 ರಂದು ಸದರಿ ಪಿಜಿ Certificate Post Graduate Certificate in Business Analytics (PGCBA) ಕೋರ್ಸ್ ರಚನೆಯ ಅರ್ಹತಾ ಮಾನದಂಡಗಳು, ಯೋಜನಾ ಪ್ರಸ್ತಾವನೆ ವರದಿ ಮತ್ತು ಪಠ್ಯಕ್ರಮದ ಪರಿಷ್ಕರಣೆ ಮಾಡಲಾಗಿರುತ್ತದೆ. (ಅನುಬಂಧ-2).

ದಿನಾಂಕ: 04.05.2026 ರಂದು ನಡೆದ ಸಂಯುಕ್ತ ಅಧ್ಯಯನ ಸಭೆಯಲ್ಲಿ ಮತ್ತೊಂದು ಹೊಸ ಡಿಪ್ಲೋಮಾ ಕಾರ್ಯಕ್ರಮವನ್ನು Diploma in Artificial Intelligence and Data Analytics (DAIDA) ಪರಿಚಯಿಸಿ ಸಮಿತಿಯು ಕೋರ್ಸ್ ರಚನೆಯ ಅರ್ಹತಾ ಮಾನದಂಡಗಳು, ಯೋಜನಾ ಪ್ರಸ್ತಾವನೆ ವರದಿ ಮತ್ತು ಪಠ್ಯಕ್ರಮದ ರಚನೆ ಮಾಡಲಾಗಿರುತ್ತದೆ. (ಅನುಬಂಧ-3). ಡಿಪ್ಲೋಮಾ ಕಾರ್ಯಕ್ರಮದ ಬಗ್ಗೆ ವಿವರವಾಗಿ ಚರ್ಚೆ ನಡೆಸಿ, ಇದನ್ನು ತಂತ್ರಜ್ಞಾನ ಕ್ಷೇತ್ರದಲ್ಲಿ ಉದಯೋನ್ಮುಖ ಮತ್ತು ಪ್ರಸ್ತುತ ಕಾರ್ಯಕ್ರಮವೆಂದು ಪರಿಗಣಿಸಿ ಅನುಮೋದಿಸಲಾಯಿತು.

ಮುಂದುವರೆದು, ಪ್ರಸ್ತುತ ಜನವರಿ 2026 ರ ಆವೃತಿಯಲ್ಲಿ PGCIT, DIT ಮತ್ತು UGCICT ಕೋರ್ಸ್‌ಗಳಿಂದ ಒಟ್ಟು 03 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಪ್ರವೇಶಾತಿ ಸಂಖ್ಯೆಯು ಕಡಿಮೆ ಇರುವುದರಿಂದ ಮುಂದಿನ ಜುಲೈ 2026ರ ಆವೃತ್ತಿಯಿಂದ ಸದರಿ ಕೋರ್ಸ್‌ಗಳಿಗೆ ಪ್ರವೇಶಾತಿಯನ್ನು ರದ್ದುಗೊಳಿಸುವ ಬಗ್ಗೆ ಚರ್ಚೆ ಹಾಗು ನಿರ್ಣಹಿಸಬೇಕಾಗಿರುತ್ತದೆ

ಮುಂದುವರೆದು, Diploma, Post Graduate Certificate in Business Analytics (PGCBA) ಹಾಗೂ Diploma in Artificial Intelligence and Data Analytics (DAIDA) ಎಂಬ ಎರಡು ಕೋರ್ಸ್‌ಗಳನ್ನು ಪ್ರಾರಂಭಿಸುವುದು ಸೂಕ್ತವೆಂದು ಅಭಿಪ್ರಾಯಿಸಿ ಮಾನ್ಯ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ತೀರ್ಮಾನ: Diploma , Post Graduate Certificate in Business Analytics (PGCBA) ಅನ್ನು ಪ್ರಾರಂಭಿಸಲು ಹಾಗೂ Diploma in Artificial Intelligence and Data Analytics (DAIDA) ಕೋರ್ಸ್‌ನ ಹೆಸರನ್ನು Diploma in Data Analytics (DDA) ಎಂದು ತಿದ್ದುಪಡಿ ಮಾಡಿ ಎರಡು ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಲಾಯಿತು.**

*****

**ವಿಷಯ ಸಂಖ್ಯೆ: 41.11**

**ವಿಷಯ:** ವಿವಿಯಲ್ಲಿ ಅಳವಡಿಸಿಕೊಳ್ಳಲಾಗಿರುವ Digital Evaluation ಅನ್ನು ಮುಂದುವರಿಸುವ ಸಂಬಂಧ ನಿರ್ಣಯ ಕೈಗೊಳ್ಳುವ ಬಗೆಗೆ.

*****

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯದ ಮೌಲ್ಯಮಾಪನಾ ಕಾರ್ಯವನ್ನು ಡಿಜಿಟಲೀಕರಣಗೊಳಿಸುವ ಸಂಬಂಧ ಅವಶ್ಯವಿದ್ದ Digital Evaluation software ಅನ್ನು ನಿಯಮಾನುಸಾರ ಕ್ರಮವಹಿಸಿ, ವಿವಿಯ ಶಾಸನಬದ್ಧ ಸಮಿತಿಗಳ ತೀರ್ಮಾನದಂತೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯಂತೆ, M/s. Convergent Wireless Communications Pvt.

ಕುಲಸಚಿವರು ಕುಲಪತಿಗಳು

Ltd. Bangaluru ರವರಿಗೆ Digital Evaluation software ಅನ್ನು ವಿವಿಯಲ್ಲಿ ಅಳವಡಿಸಿದ ದಿನಾಂಕದಿಂದ ಮೂರು ವರ್ಷಗಳ ಅವಧಿಗೆ subscription ನೀಡಲು ದಿನಾಂಕ 10.03.2022 ಹಾಗೂ 18.03.2023 ರಂದು ಕಾರ್ಯಾದೇಶಗಳನ್ನು ನೀಡಲಾಗಿರುತ್ತದೆ. ಅದರಂತೆ, ಸದರಿ ತಂತ್ರಾಂಶವು ದಿನಾಂಕ 18.07.2023 ರಿಂದ ವಿವಿಯಲ್ಲಿ ಬಳಕೆಯಲ್ಲಿದ್ದು, ಪ್ರಸ್ತುತ subscription ಅವಧಿ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ, ತಂತ್ರಾಂಶದ ಕಾರ್ಯಕ್ಷಮತೆಯ ಬಗ್ಗೆ ಪರಿಶೀಲಿಸಲು ಹಾಗೂ ಸದರಿ ತಂತ್ರಾಂಶದ ಅವಶ್ಯಕತೆ, ಉಪಯುಕ್ತತೆ, ಪರಿಣಾಮಕಾರಿತ್ವದ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ 23.07.2026 ರಂದು ಸಮಿತಿಯ ಸಭೆ ನಡೆದಿದ್ದು, ಸದರಿ ಸಮಿತಿಯು Digital Evaluation ತಂತ್ರಾಂಶವನ್ನು ಮುಂದುವರಿಸುವ ಸಂಬಂಧ ತೀರ್ಮಾನಿಸಿರುತ್ತದೆ. (ಅನುಬಂಧ–1)

ಮುಂದುವರೆದು, Digital Evaluation ತಂತ್ರಾಂಶಕ್ಕೆ ಅವಶ್ಯವಿರುವ Scope of Work ಅನ್ನು ದಿನಾಂಕ: 05.08.2026 ರಂದು ಕುಲಸಚಿವ (ಪರೀಕ್ಷಾಂಗ) ರವರು ಸಲ್ಲಿಸಿದ್ದು (ಅನುಬಂಧ–2), ಈ ಸಂಬಂಧ Digital Evaluation ಅನ್ನು ವಿವಿಯಲ್ಲಿ ಮುಂದುವರಿಸುವ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳಲು ಮಾನ್ಯ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಲಾಗಿದೆ.

***<u>ಚರ್ಚೆ</u>***

ಶ್ರೀಮತಿ ಸುನಿತ ರವರು ಮಾತನಾಡಿ ದಿನಾಂಕ: 18.07.2026ಕ್ಕೆ ಸೇವೆಯ ಅವಧಿಯು ಪೂರ್ಣಗೊಂಡಿರುವುದಾಗಿ ತಿಳಿಸಿದರು. ಮಾನ್ಯ ಕುಲಪತಿಗಳು ಮಾತನಾಡಿ ವಿವಿಯಲ್ಲಿ ಅಳವಡಿಸಿಕೊಳ್ಳಲಾಗಿರುವ Digital Evaluation ನ ಅವಧಿಯ ದಿನಾಂಕ: 18.07.2026ಕ್ಕೆ ಪೂರ್ಣಗೊಳ್ಳುವ ಮುಂಚಿತವಾಗಿ ಕ್ರಮವಹಿಸದೆ ಈ ರೀತಿ ವಿಳಂಬವಾಗಿ ಕ್ರಮವಹಿಸಿರುವ ಬಗ್ಗೆ ಬೇಸರ ವ್ಯಕ್ತಪಡಿಸಿ ಮುಂದಿನ ದಿನಗಳಲ್ಲಿ ಈ ರೀತಿ ವಿಳಂಬವಾಗದಂತೆ ಕ್ರಮವಹಿಸುವಂತೆ ಸೂಚಿಸಿದರು. ಮುಂದುವರೆದು, ಇವರ ಸೇವೆಯು ಎಲ್ಲಿಯವರೆಗೆ ಬೇಕಿರುತ್ತದೆ ಎಂಬುದರ ಬಗ್ಗೆ ಮಾಹಿತಿ ಒದಗಿಸುವಂತೆ ಸೂಚಿಸಿದರು.

ಮಾನ್ಯ ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ ಅಕ್ಟೋಬರ್ ವರೆಗೆ ಇವರ ಸೇವೆ ಬೇಕಿರುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಅವಧಿ ಪೂರ್ಣಗೊಂಡ ನಂತರದಲ್ಲಿ ಪಡೆಯುವ ಸೇವೆಗೆ ಯಾವುದೇ ರೀತಿಯ ಕ್ರಮವಹಿಸದೆ ಸದರಿಯವರಿಂದಲೇ ಸೇವೆ ಪಡೆದಲ್ಲಿ ಆಡಿಟ್ ಆಕ್ಷೇಪಣೆಗಳು ಬರುತ್ತದೆ ಎಂದು ತಿಳಿಸಿದರು.

**ತೀರ್ಮಾನ: ವಿವಿಯಲ್ಲಿ ಅಳವಡಿಸಿಕೊಳ್ಳಲಾಗಿರುವ Digital Evaluation ಅನ್ನು ಮುಂದುವರಿಸುವ ದಿನಾಂಕ 23.07.2026 ರಂದು ನಡೆದ ಸಮಿತಿಯ ಸಭೆಯ ತೀರ್ಮಾನಕ್ಕೆ ಅನುಮೋದನೆ ನೀಡಲಾಯಿತು. ಮುಂದುವರೆದು, ಹೊಸದಾಗಿ 3 ವರ್ಷದ ಅವಧಿಗೆ Digital Evaluation ತಂತ್ರಾಂಶದ Subscription (ಅವಧಿ ಪೂರ್ಣಗೊಳ್ಳುವ ಸಾಲಿನಲ್ಲಿ ಸಂಬಂಧಿತ ಸಾಲಿನ ಪರೀಕ್ಷಾ ಮೌಲ್ಯಮಾಪನ ಕಾರ್ಯಪೂರ್ಣಗೊಳ್ಳುವವರೆಗೆ ಸೇವೆ ಒದಗಿಸುವುದು ಎಂಬ ಷರತ್ತನ್ನು ದಾಖಲಿಸಿ) ಪಡೆಯಲು ನಿಯಮಾನುಸಾರ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳುವುದು ಎಂದು ತೀರ್ಮಾನಿಸಲಾಯಿತು.**

*****

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 41.12**

ವಿಷಯ: ದಿನಾಂಕ: 29.07.2026 ರಂದು ನಡೆಸಲಾದ ಪಿಹೆಚ್.ಡಿ.ಶಿಕ್ಷಣ ಕ್ರಮದ ಕುಂದುಕೊರತೆಗೆ ಸಂಬಂಧಿಸಿದ ಸಮಿತಿ ಸಭೆಯ ನಡಾವಳಿ ಅನುಮೋದನೆ ಕೋರಿ

*****

ಮಾನ್ಯ ಡೀನ್ (ಶೈಕ್ಷಣಿಕ)ರವರ ಅಧ್ಯಕ್ಷತೆಯಲ್ಲಿ ದಿನಾಂಕ: 29.07.2026 ರಂದು ನಡೆಸಲಾದ ಪಿಹೆಚ್.ಡಿ ಶಿಕ್ಷಣಕ್ರಮದ ಕುಂದುಕೊರತೆಗೆ ಸಂಬಂಧಿಸಿದ ಸಮಿತಿ ಸಭೆಯಲ್ಲಿ ಕೈಗೊಂಡ ತೀರ್ಮಾನವನ್ನು (ಅನುಬಂಧ-01) ರಲ್ಲಿ ಲಗತ್ತಿಸಿದೆ. 41ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ

**ಚರ್ಚೆ**

**ಮಾನ್ಯ ಕುಲಪತಿಗಳು ಮಾತನಾಡಿ ದಿನಾಂಕ: 29.07.2026 ರಂದು ನಡೆದಿರುವ ಪಿಹೆಚ್.ಡಿ ಕುಂದುಕೊರತೆ ಸಮಿತಿಯಲ್ಲಿ ಮಂಡಿತವಾಗಿ ತೀರ್ಮಾನವಾಗಿರುವ ವಿಷಯಗಳ ಬಗ್ಗೆ ಸಭೆಯಲ್ಲಿ ವಿವರವಾಗಿ ಕೆಳಕಂಡಂತೆ ಚರ್ಚಿಸಲಾಯಿತು;**

**ವಿಷಯ-1 ಡಾ. ಸುಮತಿ ರಾಮಕೃಷ್ಣಗೌಡ, ಸಹಾಯಕ ಪ್ರಾಧ್ಯಾಪಕರು**

- ಮಾನ್ಯ ಕುಲಪತಿಗಳು ಮಾತನಾಡಿ ಡಾ. ಸುಮತಿ ರಾಮಕೃಷ್ಣಗೌಡ ರವರು ಇಲಾಖಾ ವಿಚಾರಣಾ ಬಾಕಿ ಇದ್ದು ವಿಶ್ವವಿದ್ಯಾನಿಲಯದ ಯಾವುದೇ ಮಾರ್ಗದರ್ಶಕರು ಸಂಪೂರ್ಣವಾಗಿ ಸೇವೆಯಿಂದ ಬಿಡುಗಡೆ ಹೊಂದುವವರೆಗೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅವರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಹಿ ಮಾಡಲು ಅವಕಾಶ ನೀಡುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮುಂದುವರೆದು, ಬಿ.ಓ.ಎಸ್ ಅಧ್ಯಕ್ಷರಿಗೆ ಸಹಿ ಮಾಡಲು ಅವಕಾಶ ನೀಡವ ಬಗ್ಗೆಯೂ ಆಲೋಚಿಸಬಹುದು ಎಂದು ತಿಳಿಸಿದರು.
- ಮಾನ್ಯ ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ ಬಿ.ಓ.ಎಸ್ ಅಧ್ಯಕ್ಷರಿಗೆ ವಿದ್ಯಾರ್ಥಿಯ ಪಿಹೆಚ್.ಡಿ **Specilization** ಬಗ್ಗೆ ಸರಿಯಾದ ಮಾಹಿತಿ ಇಲ್ಲದಿರುವ ಸಂದರ್ಭದಲ್ಲಿ ತೊಂದರೆಯಾಗುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು.
- ಶ್ರೀಮತಿ ಸುನಿತ ರವರು ಮಾತನಾಡಿ ಈ ರೀತಿ ಅಮಾನತ್ತಿನಲ್ಲಿರುವ ಅಧ್ಯಾಪಕರಿಂದ ಸಂಶೋಧನಾರ್ಥಿಗಳ ವಾರ್ಷಿಕ ವರದಿಗೆ ಮೇಲು ಸಹಿ ಮಾಡಿಸಿದಲ್ಲಿ ಮುಂದೆ ಕಾನೂನಾತ್ಮಕ ತೊಡಕುಗಳು ಉಂಟಾಗಬಹುದೆ ಎಂಬುದರ ಬಗ್ಗೆ ಆಲೋಚಿಸುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ತೀರ್ಮಾನ: **ಈ ರೀತಿಯ ಪ್ರಕರಣಗಳಲ್ಲಿ ಯಾವ ರೀತಿಯ ಕ್ರಮವಹಿಸಲಾಗಿದೆ / ಕ್ರಮವಹಿಸಲಾಗುತ್ತದೆ ಎಂಬುದರ ಬಗ್ಗೆ ಯು.ಜಿ.ಸಿ. ಮಾರ್ಗಸೂಚಿ ಹಾಗೂ ಇತರೆ ವಿಶ್ವವಿದ್ಯಾನಿಲಯಗಳಿಂದ ಮಾಹಿತಿ ಪಡೆದು ಪಿಹೆಚ್.ಡಿ. ಕುಂದುಕೊರತೆ ಸಮಿತಿಯು ವರದಿಯನ್ನು ಸಿದ್ಧಪಡಿಸಿ ಮುಂದಿನ ಶೈಕ್ಷಣಿಕ ಮಂಡಳಿಗೆ ಸಭೆಗೆ ಮಂಡಿಸುವಂತೆ ತಿಳಿಸಿ, ಪ್ರಸ್ತುತ ಪಿಹೆಚ್.ಡಿ ಸಂಶೋಧನಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅಮಾನತ್ತಿನಲ್ಲಿರುವ ಮಾರ್ಗದರ್ಶಕರಿಂದಲೇ ಸಂಶೋಧನಾರ್ಥಿಗಳ ವರದಿಯನ್ನು ಪರಿಶೀಲಿಸಿ ಮೇಲು ಸಹಿ ಮಾಡಲು ಅವಕಾಶ ನೀಡಲು ತೀರ್ಮಾನಿಸಲಾಯಿತು.**

ಕುಲಸಚಿವರು | ಕುಲಪತಿಗಳು

ವಿಷಯ-2 ಹಿಂದಿ ಪಿಹೆಚ್.ಡಿ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಕೋರ್ಸ್‌ವರ್ಕ್ ತರಗತಿಗಳನ್ನು ತಾತ್ಕಾಲಿಕ ಅಧ್ಯಾಪಕರುಗಳಿಂದ ನಡೆಸು ಬಗ್ಗೆ.

ಪಿಹೆಚ್.ಡಿ. ಕುಂದುಕೊರತೆ ಸಮಿತಿಯ ವರದಿಯನ್ನು ಸಭೆಯಲ್ಲಿ ಮತ್ತೊಮ್ಮೆ ಪರಿಶೀಲಿಸಿ ವಿವರವಾಗಿ ಚರ್ಚಿಸಿ ಕೆಳಕಂಡಂತೆ ತೀರ್ಮಾನಿಸಲಾಯಿತು.

ತೀರ್ಮಾನ: ಪಿಹೆಚ್.ಡಿ. ಸಂಶೋಧನಾರ್ಥಿಗಳ ಹಿತದೃಷ್ಟಿಯಿಂದ ಪ್ರಸ್ತುತ ವಿಭಾಗದಲ್ಲಿ ತಾತ್ಕಾಲಿಕ ಅಧ್ಯಾಪಕರುಗಳಿಂದ ಕೋರ್ಸ್‌ವರ್ಕ್ ತರಗತಿಗಳನ್ನು ನಡೆಸಿರುವ ಕ್ರಮಕ್ಕೆ ಸಮ್ಮತಿಸಿ, ಮುಂದಿನ ದಿನಗಳಲ್ಲಿ ಕಡ್ಡಾಯವಾಗಿ ಖಾಯಂ ಅಧ್ಯಾಪಕರುಗಳಿಂದಲೇ ಕೋರ್ಸ್‌ವರ್ಕ್ ತರಗತಿಗಳನ್ನು ನಡೆಸುವುದು ಎಂದು ತೀರ್ಮಾನಿಸಲಾಯಿತು.

----

ವಿಷಯ-3 ರಸಾಯನಶಾಸ್ತ್ರ ಪಿಹೆಚ್.ಡಿ ವಿಷಯದಲ್ಲಿ ವಿದ್ಯಾರ್ಥಿಗಳು ಖಾಯಂ ನೋಂದಣಿ ಪಡೆಯದೇ ಇದ್ದರು ಸಹ ಅರ್ಧವಾರ್ಷಿಕ ವರದಿಗಳನ್ನು ಸಲ್ಲಿಸಿರುವ ಬಗ್ಗೆ.

ರಸಾಯನಶಾಸ್ತ್ರ ಪಿಹೆಚ್.ಡಿ ವಿಷಯದಲ್ಲಿ ವಿದ್ಯಾರ್ಥಿಗಳು ಖಾಯಂ ನೋಂದಣಿ ಪಡೆಯದೇ ಇದ್ದರು ಸಹ ಅರ್ಧವಾರ್ಷಿಕ ವರದಿಗಳನ್ನು ಸಲ್ಲಿಸಿರುವ ಬಗ್ಗೆ ವಿವರವಾಗಿ ಚರ್ಚಿಸಿ ಕೆಳಕಂಡಂತೆ ತೀರ್ಮಾನಿಸಲಾಯಿತು.

ತೀರ್ಮಾನ: ರಸಾಯನಶಾಸ್ತ್ರ ಪಿಹೆಚ್.ಡಿ ವಿಷಯದಲ್ಲಿ ವಿದ್ಯಾರ್ಥಿಗಳು ಖಾಯಂ ನೋಂದಣಿ ಪಡೆಯದೇ ವಾರ್ಷಿಕ ವರದಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಮಾರ್ಗದರ್ಶಕರಿಗೆ ನೋಟಿಸ್ ನೀಡುವುದು ಹಾಗೂ ಪ್ರಸ್ತುತ ಸಲ್ಲಿಕೆಯಾಗಿರುವ ವರದಿಯನ್ನು ತಿರಸ್ಕರಿಸುವಂತೆ ತೀರ್ಮಾನಿಸಲಾಯಿತು. ಮುಂದುವರೆದು, ಸದರಿ ವಿದ್ಯಾರ್ಥಿಗಳಿಗೆ ಖಾಯಂ ನೋಂದಣಿ ಮಾಡಿಸಿ ನಿಯಮಾನುಸಾರ ವಾರ್ಷಿಕ ವರದಿಯನ್ನು ಸಲ್ಲಿಸುವಂತೆಯೂ ತೀರ್ಮಾನಿಸಲಾಯಿತು.

----

ವಿಷಯ-4 ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಕಾರ್ಯನಿರ್ವಹಿಸುತ್ತಿದ್ದ ಡಾ. ಆರ್.ಹೆಚ್. ಪವಿತ್ರ, ಪ್ರಾಧ್ಯಾಪಕರು,

ತೀರ್ಮಾನ: ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಕಾರ್ಯನಿರ್ವಹಿಸುತ್ತಿದ್ದ ಡಾ. ಆರ್.ಹೆಚ್. ಪವಿತ್ರ, ಪ್ರಾಧ್ಯಾಪಕರು, ಇವರು ಅಂತರ್ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಗೊಂಡಿರುವ ಹಿನ್ನೆಲೆಯಲ್ಲಿ ಇವರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ ಸಂಶೋಧನೆ ಕೈಗೊಂಡಿರುವ ಸಂಶೋಧನಾರ್ಥಿಗಳಿಗೆ ಸದರಿಯವರೆ ಮಾರ್ಗದರ್ಶಕರಾಗಿ ಮುಂದುವರೆಸಲು ತೀರ್ಮಾನಿಸಲಾಯಿತು.

----

ವಿಷಯ-5 ಶ್ರೀ ರವಿಕುಮಾರ್, ಸಂಶೋಧನಾರ್ಥಿ, ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ

ತೀರ್ಮಾನ: ಶ್ರೀ ರವಿಕುಮಾರ್, ಸಂಶೋಧನಾರ್ಥಿ, ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ರವರ ವಿಷಯವನ್ನು ಕೈಬಿಡಲು ತೀರ್ಮಾನಿಸಲಾಯಿತು.

*****

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 41.13**

**ವಿಷಯ:** 2025–26ನೇ ಸಾಲಿನಲ್ಲಿ ಖಾಲಿಯಿರುವ ಪಿಹೆಚ್.ಡಿ ಸೀಟುಗಳಿಗೆ ಪರಿಷ್ಕೃತ ಅಧಿಸೂಚನೆ ಹೊರಡಿಸಿರುವ ಬಗ್ಗೆ ಅನುಸಮರ್ಥನೆಗಾಗಿ.

*****

2025–26ನೇ ಸಾಲಿನಲ್ಲಿ ಖಾಲಿಯಿರುವ ಪ್ರವೇಶಾತಿ ಪ್ರಕ್ರಿಯೆ ಪ್ರಕಟಿಸಲು ಪಿಹೆಚ್.ಡಿ ಸೀಟುಗಳಿಗೆ ಎಲ್ಲಾ ಅಧ್ಯಯನ ಮತ್ತು ಸಂಶೋಧನಾ ವಿಭಾಗವಾರು ಪಿಹೆಚ್.ಡಿ ಮಾರ್ಗದರ್ಶಕರ ಬಳಿ ಪ್ರಸ್ತುತ ಪ್ರವರ್ಗವಾರು ಖಾಲಿಯಿರುವ ಪಿಹೆಚ್.ಡಿ ಸೀಟಿನ ವಿವರಗಳನ್ನು ದಿ:12/02/2026ರಂದು ಸುತ್ತೋಲೆ ಮುಖಾಂತರ ಕೋರಲಾಗಿದ್ದು, ವಿಭಾಗವಾರು ಸಂಶೋಧನಾ ಮಾರ್ಗದರ್ಶಕರ ಬಳಿ ಖಾಲಿಯಿರುವ ಸೀಟನ್ನು ಪ್ರವರ್ಗವಾರು ಸಂಶೋಧನಾ ಸ್ಥಾನಗಳಿಗೆ ಪ್ರವೇಶಾತಿ ಮಾಡಲು ಒದಗಿಸಿರುವ ಮಾಹಿತಯನ್ವಯ ಅಧಿಸೂಚನೆ ಹೊರಡಿಸಲು ಮಾನ್ಯ ಕುಲಪತಿಗಳು ದಿನಾಂಕ: 04.04.2026 ರಂದು ಅನುಮೋದನೆಯನ್ವಯ ದಿನಾಂಕ: 27.04.2026 ರಂದು ಅಧಿಸೂಚನೆಯನ್ನು ಹೊರಡಿಸಿ ದಿನಾಂಕ: 16.04.2026 ರಂದು ನಡೆದ 68ನೇ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ)

ತದನಂತರ, ಪ್ರೊ.ಶಂಕರನಾರಣಪ್ಪ, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರ ಬಳಿ ಇರುವ ಒಬ್ಬ ಸಂಶೋಧನಾರ್ಥಿಯು ಮಹಾಪ್ರಬಂಧವನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ 01 (ಒಂದು) ಖಾಲಿಯಾದ ಪಿಹೆಚ್.ಡಿ ಸ್ಥಾನಕ್ಕೆ ಪ್ರವರ್ಗವಾರು ಪಿಹೆಚ್.ಡಿ.ಗೆ ಸಂಬಂಧಿಸಿದಂತೆ ವಿಭಾಗದಿಂದ ಹಾಗೂ ಸಂಬಂಧಪಟ್ಟ ಮಾರ್ಗದರ್ಶಕರು ಮನವಿ ಪತ್ರ ಸಲ್ಲಿಸಿರುವುದರಿಂದ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪರಿಷ್ಕೃತ ಅಧಿಸೂಚನೆಯನ್ನು ದಿನಾಂಕ:22.05.2026 ರಂದು ಹೊರಡಿಸಲಾಗಿರುತ್ತದೆ ಸದರಿ ವಿಷಯವನ್ನು 41ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ

**ಚರ್ಚೆ**

ಮಾನ್ಯ ಕುಲಪತಿಗಳು ಮಾತನಾಡಿ ಪಿಹೆಚ್.ಡಿ ಅಧಿಸೂಚನೆಯಲ್ಲಿ ರೋಸ್ಟರ್ ನಿಯಮ ಅನ್ನು ಪಾಲಿಸಿರುವ ಬಗ್ಗೆ ಮಾಹಿತಿ ಪಡೆದರು. ಮುಂದುವರೆದು, ಕರಾಮುವಿ ಯಲ್ಲಿ ಕಡಿಮೆ ಸಂಖ್ಯೆಯ ಪಿಹೆಚ್.ಡಿ ಮಾರ್ಗದರ್ಶಕರಿರುವ ಹಿನ್ನೆಲೆಯಲ್ಲಿ ನಿವೃತ್ತಿಯ ಅವಧಿ 3 ತಿಂಗಳವರೆಗೂ ಮಾರ್ಗದರ್ಶನಕ್ಕೆ ಅವಕಾಶ ನೀಡುವುದು ಸೂಕ್ತ ಎಂದು ತಿಳಿಸಿದರು.

**ತೀರ್ಮಾನ: 2025–26ನೇ ಸಾಲಿನಲ್ಲಿ ಖಾಲಿಯಿರುವ ಪಿಹೆಚ್.ಡಿ ಸೀಟುಗಳಿಗೆ ಪರಿಷ್ಕೃತ ಅಧಿಸೂಚನೆ ಹೊರಡಿಸಿರುವ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.**

*****

ಕುಲಸಚಿವರು

ಕುಲಪತಿಗಳು

ವಿಷಯ ಸಂಖ್ಯೆ: 41.14

ವಿಷಯ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಚಲನಚಿತ್ರಕ್ಕೆ ಸಂಬಂಧಿಸಿದ ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸು ಬಗೆಗೆ.

********

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಚಲನಚಿತ್ರ ಸಂಬಂಧಿತ ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಉದ್ದೇಶಿಸಿದ್ದು, ಈ ಸಂಬಂಧ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:24-07-2026 ಮತ್ತು 31-07-2026 ರಂದು ಡೀನ್(ಶೈಕ್ಷಣಿಕ), ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗಗಳ ಬೋಧಕ ಸಿಬ್ಬಂದಿಗಳು ಮತ್ತು ಸ್ಟುಡಿಯೋ ವಿಭಾಗದ ಯೋಜನಾ ವಿನ್ಯಾಸಕರು ಸಭೆಯನ್ನು ನಡೆಸಿ ಕೆಳಕಂಡ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ತೀರ್ಮಾನಿಸಲಾಗಿರುತ್ತದೆ (ನಡಾವಳಿಯ ಪ್ರತಿಯನ್ನು ಲಗತ್ತಿಸಿದೆ) ಈ ಸಂಬಂಧ ಶೈಕ್ಷಣಿಕ ಮಂಡಳಿಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

1. Diploma in Script Writing
2. Diploma in Film Editing
3. Diploma in Cinematography
4. Diploma in Film Production
5. Diploma in Film Making
6. Diploma/ Certificate in Film Skills

ತೀರ್ಮಾನ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಚಲನಚಿತ್ರಕ್ಕೆ ಸಂಬಂಧಿಸಿದ ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ ಅನುಮೋದನೆ ನೀಡಲಾಯಿತು.

*****

ವಿಷಯ ಸಂಖ್ಯೆ: 41.15

ವಿಷಯ: ODL ನಲ್ಲಿ Certificate, PG Diploma ಮತ್ತು Degree Programs ಗಳನ್ನು ಪ್ರಾರಂಭಿಸಲು PPR/Syllabus ಅನುಮೋದನೆಗಾಗಿ.

*****

DEB ಮತ್ತು UGC ಯಿಂದ MSc Biochemistry ಶಿಕ್ಷಣಕ್ರಮವನ್ನು ಸ್ಥಗಿತಗೊಳಿಸಿದೆ. ಆದ್ದರಿಂದ ODL ನಲ್ಲಿ ಈ ಕೆಳಕಂಡ courses ಗಳನ್ನು ಪ್ರಾರಂಭಿಸಲು PPR/Syllabus ಗಳನ್ನು BOS ನಲ್ಲಿ ಅನುಮೋದನೆ ಪಡೆದು ಈ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ಕುಲಸಚಿವರು ಕುಲಪತಿಗಳು

**I.** **<u>Certificate courses:</u>**

1. **Biochemical Laboratory Skill Training Programme**
2. **Bioinformatics and AI Tools in Biology**
3. **Research Methodology & Scientific Communication for Science Graduates**

**II. <u>Post Graduate Diploma:</u>**

1. **Post Graduate Diploma in Bioinformatics and Biostatistics**

**III. <u>Degree Programs:</u>**

1. **BSc in Chemical Biology**
2. **BSc in Bioinformatics**

ತೀರ್ಮಾನ: **Title** ಗಳನ್ನು ತಿದ್ದುಪಡಿ ಮಾಡಿ **Certificate, PG Diploma** ಮತ್ತು **Degree Programs** ಗಳನ್ನು ಪ್ರಾರಂಭಿಸಲು **PPR/Syllabus** ಅನ್ನು ಸಲ್ಲಿಸುವುದು, ಅನುಮೋದನೆ ದೊರೆತಲ್ಲಿ ಕೋರ್ಸ್‌ಗಳನ್ನು ಪ್ರಾರಂಭಿಸುವುದು ಮತ್ತು ಪ್ರಸ್ತುತ ಲಭ್ಯವಿರುವ ಸಿದ್ಧಪಾಠಗಳನ್ನೆ ಬಳಸಿಕೊಳ್ಳುವುದು ಅವಶ್ಯವಿದ್ದಲ್ಲಿ ಯಾವುದೇ ಆರ್ಥಿಕ ವೆಚ್ಚವಿಲ್ಲದೆ ವಿಭಾಗದ ಅಧ್ಯಾಪಕರಿಂದಲೇ ಸಿದ್ಧಪಾಠಗಳ ರಚನೆ ಕಾರ್ಯಕೈಗೊಳ್ಳುವುದು ಎಂದು ತೀರ್ಮಾನಿಸಲಾಯಿತು.

*****

**ವಿಷಯ ಸಂಖ್ಯೆ: 41.16**

ವಿಷಯ : ಕರಾಮುವಿ ಯಲ್ಲಿ ಎಂ.ಎಸ್ಸಿ. ಭೂ ವಿಜ್ಞಾನ ಕಾರ್ಯಕ್ರಮವನ್ನು ಮುಂದುವರೆಸುವ ಕುರಿತು ಸೂಕ್ತ ಚರ್ಚೆ ಮತ್ತು ನಿರ್ಣಯದ ಬಗ್ಗೆ

ಪ್ರಸ್ತುತ ಕರಾಮುವಿಯಲ್ಲಿ ಎಂ.ಎಸ್ಸಿ. ಭೂ ವಿಜ್ಞಾನ ಕಾರ್ಯಕ್ರಮವನ್ನು 2024-25 ನೇ ಸಾಲಿನಿಂದ ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಲಿಯಿಂದ ಅನುಮೋದನೆ ಪಡೆದು ಈ ಕಾರ್ಯಕ್ರಮವನ್ನು ಪರಿಚಯಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಪ್ರತಿ ಶೈಕ್ಷಣಿಕ ವರ್ಷಗಳಿಂದ 2024-25 ರ ಸಾಲಿನಿಂದ ಶೂನ್ಯ (ಜುಲೈ ಆವೃತಿ) ಸಂಖ್ಯೆ, 2024-25 ರ ಸಾಲಿನಿಂದ ಶೂನ್ಯ (ಜನವರಿ ಆವೃತಿ) 2 ವಿದ್ಯಾರ್ಥಿಗಳ ಸಂಖ್ಯೆ, 2025-26 ರ ಸಾಲಿನಲ್ಲಿ 3 ವಿದ್ಯಾರ್ಥಿಗಳ (ಜುಲೈ ಆವೃತಿ) ಸಂಖ್ಯೆಗಳಂತೆ ಪ್ರವೇಶಾತಿ ಪಡೆದಿರುತ್ತಾರೆ. ಈ ಕಾರ್ಯಕ್ರಮಗಳ Syllabus (04 Semesters) ರಚಿಸಲಾಗಿದ್ದು, ಕಡಿಮೆ ವಿದ್ಯಾರ್ಥಿಗಳು ದಾಖಲಾಗಿದ್ದರಿಂದ Self Learning Materials (SLM) ಗಳನ್ನು ಬರೆದಿರುವುದಿಲ್ಲ.

ಕುಲಸಚಿವರು ಕುಲಪತಿಗಳು

ಈ ಹಿಂದಿನ ವಿದ್ಯಾರ್ಥಿಗಳಿಗೆ ಇತರೆ ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆಯುವಂತೆ ತಿಳಿಸಲಾಗಿತ್ತು. 2025-26 ರ ಸಾಲಿನಲ್ಲಿ 3 ವಿದ್ಯಾರ್ಥಿಗಳು (ಜುಲೈ ಆವೃತಿ) ಪ್ರವೇಶಾತಿ ಪಡೆದು, ಈ ಕಾರ್ಯಕ್ರಮವನ್ನು ಮುಂದುವರೆಸುವಂತೆ ಕೋರಿರುತ್ತಾರೆ.

ಎಂ.ಎಸ್ಸಿ. ಭೂ ವಿಜ್ಞಾನ ಕಾರ್ಯಕ್ರಮದಲ್ಲಿ I Semister ನಲ್ಲಿ Open Elective: Basics of Earth Science ಇದ್ದು, Self Learning Materials (SLM) ರಚಿಸಲಾಗಿದೆ. II Semister ನಲ್ಲಿ Open Elective: Indian Mineral Resources ಇದ್ದು, Self Learning Materials (SLM) ರಚಿಸುವ ಪ್ರಗತಿಯಲ್ಲಿರುತ್ತದೆ. ಪ್ರತಿ ಶೈಕ್ಷಣಿಕ ಸಾಲಿನಲ್ಲಿ ಸುಮಾರು 35 ರಿಂದ 40 ವಿದ್ಯಾರ್ಥಿಗಳು ಈ ಕಾರ್ಯಕ್ರಮದ Open Elective ಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ ಹಾಗೂ Assignments ಮತ್ತು Term End Examination ಅನ್ನು ಬರೆದು ಉತ್ತೀರ್ಣರಾಗಿರುತ್ತಾರೆ. Open Elective ವಿದ್ಯಾರ್ಥಿಗಳ Courses ಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿ, SLM ಗಳನ್ನು ಮುಂದುವರೆಸಬಹುದಾಗಿರುತ್ತದೆ.

ಎಂ.ಎಸ್ಸಿ. ಭೂ ವಿಜ್ಞಾನ ಕಾರ್ಯಕ್ರಮವನ್ನು ಮುಂದುವರೆಸಿದಲ್ಲಿ SLM ಗಳನ್ನು ರಚಿಸಬೇಕಾಗಿರುತ್ತದೆ ಎಂಬ ಅಂಶದ ಬಗ್ಗೆ ಮುಂದಿನ ನಿರ್ಧಾರ ಮಾಡಬೇಕಾಗಿರುತ್ತದೆ.

ಸದರಿ ವಿಷಯದ ಬಗ್ಗೆ ಸೂಕ್ತ ತೀರ್ಮಾನವನ್ನು ಕೈಗೊಳ್ಳುವ ಸಂಬಂಧ, ಶೈಕ್ಷಣಿಕ ಮಂಡಲಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲು ಕೋರಿ ಕಡತ ಮಂಡಿಸಲಾಗಿದೆ.

**ಚರ್ಚೆ**

**ಎಂ.ಎಸ್ಸಿ. ಭೂ ವಿಜ್ಞಾನ ವಿಷಯಕ್ಕೆ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯು ತೀರ ಕಡಿಮೆ ಇದ್ದು ಈ ಕೋರ್ಸ್‌ಗಳನ್ನು ನಡೆಸುವುದು ಅವಶ್ಯವಿಲ್ಲವೆಂದು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರೊ. ನಿರಂಜನ್ ರಾಜ್ ಎಸ್, ರವರು ಮಾತನಾಡಿ ಎಂ.ಎಸ್ಸಿ. ಭೂ ವಿಜ್ಞಾನಗೆ 2028 ರವರೆಗೆ ಮಾನ್ಯತೆ ಇರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.**

**ತೀರ್ಮಾನ: ಎಂ.ಎಸ್ಸಿ. ಭೂ ವಿಜ್ಞಾನ ಕೋರ್ಸ್ ಅನ್ನು ಮುಂದುವರೆಸುವುದು ಮತ್ತು ಪ್ರಸ್ತುತ ಲಭ್ಯವಿರುವ ಎಸ್.ಎಲ್.ಎಂ. ಗಳನ್ನೆ ಬಳಸಿಕೊಳ್ಳುವುದು ಎಂದು ತೀರ್ಮಾನಿಸಲಾಯಿತು ಹಾಗೂ Open Elective ಪತ್ರಿಕೆಗಳನ್ನು ಯಾವುದೇ ಆರ್ಥಿಕ ವೆಚ್ಚವಿಲ್ಲದೆ ವಿಭಾಗದವರೆ ರಚಿಸುವುದು ಎಂದು ತೀರ್ಮಾನಿಸಲಾಯಿತು.**

*****

ಕುಲಸಚಿವರು ಕುಲಪತಿಗಳು

***ವಿಷಯ ಸಂಖ್ಯೆ: 41.17***

**ವಿಷಯ: ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕೌಶಲ್ಯಾಭಿವೃದ್ಧಿ ಯೋಜನೆಗಳು/ಕಾರ್ಯಕ್ರಮಗಳಡಿ ಪ್ರಸ್ತಾವನೆಗಳನ್ನು ಸಲ್ಲಿಸುವ ಕುರಿತು**

ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರವು ವಿದ್ಯಾರ್ಥಿಗಳ ಉದ್ಯೋಗಾರ್ಹತೆ, ಸ್ವಯಂ ಉದ್ಯೋಗ ಮತ್ತು ಜೀವನೋಪಾಯದ ಅವಕಾಶಗಳನ್ನು ವೃದ್ಧಿಸುವ ಉದ್ದೇಶದಿಂದ ಕೌಶಲ್ಯಾಭಿವೃದ್ಧಿಗೆ ಅತ್ಯುನ್ನತ ಆದ್ಯತೆ ನೀಡುತ್ತಿವೆ. ಈ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳು ತಮ್ಮ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಕೌಶಲ್ಯಾಧಾರಿತ ಶಿಕ್ಷಣವನ್ನು ಅಳವಡಿಸಿಕೊಳ್ಳುವಂತೆ ಹಾಗೂ ಸರ್ಕಾರದ ವಿವಿಧ ಕೌಶಲ್ಯಾಭಿವೃದ್ಧಿ ಯೋಜನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಉತ್ತೇಜಿಸಲಾಗುತ್ತಿದೆ.

ರಾಷ್ಟ್ರೀಯ ಶಿಕ್ಷಣ ನೀತಿ–2020ರ ಆಶಯಗಳಿಗೆ ಅನುಗುಣವಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು (KSOU) ತನ್ನ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಕೌಶಲ್ಯಾಧಾರಿತ ಶಿಕ್ಷಣಕ್ಕೆ ವಿಶೇಷ ಒತ್ತು ನೀಡುತ್ತಿದೆ. ವಿಶ್ವವಿದ್ಯಾಲಯದ ಎಲ್ಲಾ ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಲ್ಲಿ ವಿಷಯ-ನಿರ್ದಿಷ್ಟ (Discipline-specific) ಕೌಶಲ್ಯಗಳನ್ನು ಅಳವಡಿಸಲಾಗಿದ್ದು, ವಿದ್ಯಾರ್ಥಿಗಳ ಉದ್ಯೋಗಾರ್ಹತೆಯನ್ನು ಹೆಚ್ಚಿಸುವ ಉದ್ದೇಶದಿಂದ ಸಂವಹನ ಕೌಶಲ್ಯ (Communication Skills), ಮೃದು ಕೌಶಲ್ಯ (Soft Skills), ಜೀವನ ಕೌಶಲ್ಯಗಳು (Life Skills) ಹಾಗೂ ಇತರೆ ಸಾಮಾನ್ಯ ಕೌಶಲ್ಯಗಳನ್ನು ಸಹ ಕಲಿಕಾ ಕಾರ್ಯಕ್ರಮಗಳ ಮೂಲಕ ಒದಗಿಸಲಾಗುತ್ತಿದೆ.

ಇದರೊಂದಿಗೆ, ವಿಶ್ವವಿದ್ಯಾಲಯವು ನವದೆಹಲಿಯ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ನಿಗಮ (National Skill Development Corporation – NSDC) ನೊಂದಿಗೆ ತಿಳುವಳಿಕಾ ಒಪ್ಪಂದ (Memorandum of Understanding) ಮಾಡಿಕೊಂಡಿದ್ದು, ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ (Artificial Intelligence), ಯಂತ್ರ ಕಲಿಕೆ (Machine Learning), ಕ್ಲೌಡ್ ಕಂಪ್ಯೂಟಿಂಗ್, ಸೈಬರ್ ಭದ್ರತೆ, ಡೇಟಾ ಅನಾಲಿಟಿಕ್ಸ್ ಸೇರಿದಂತೆ ಇತ್ತೀಚಿನ ಮತ್ತು ಅತ್ಯಾಧುನಿಕ ತಂತ್ರಜ್ಞಾನಾಧಾರಿತ ಕೌಶಲ್ಯಗಳನ್ನು ಒದಗಿಸುವ ಉದ್ದೇಶದಿಂದ ಸೆಂಟರ್ ಫಾರ್ ಫ್ಯೂಚರ್ ಸ್ಕಿಲ್ಸ್ (Centre for Future Skills) ಅನ್ನು ಸ್ಥಾಪಿಸಿದೆ.

ವೃತ್ತಿಪರ ಶಿಕ್ಷಣ ಮತ್ತು ಕೌಶಲ್ಯ ತರಬೇತಿ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯದ ಸಾಮರ್ಥ್ಯವನ್ನು ಪರಿಗಣಿಸಿ, ನವದೆಹಲಿಯ ರಾಷ್ಟ್ರೀಯ ವೃತ್ತಿಪರ ಶಿಕ್ಷಣ ಮತ್ತು ತರಬೇತಿ ಮಂಡಳಿ (National Council for Vocational Education and Training – NCVET) ಯಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ Dual Body Status ನೀಡಲಾಗಿದೆ. ಅಲ್ಲದೆ, ವಿಶ್ವವಿದ್ಯಾಲಯವು Assessment and Awarding Body ಆಗಿಯೂ ಮಾನ್ಯತೆ ಪಡೆದಿದೆ.

ಮೇಲ್ಕಂಡ ಹಿನ್ನೆಲೆಯಲ್ಲಿ, ಕೌಶಲ್ಯಾಭಿವೃದ್ಧಿ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯ ಹೊಂದಿರುವ ಮೂಲಸೌಕರ್ಯ, ಮಾನವ ಸಂಪನ್ಮೂಲ, ರಾಜ್ಯಾದ್ಯಂತ ಇರುವ ಪ್ರಾದೇಶಿಕ ಕೇಂದ್ರಗಳ ಜಾಲ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪಡೆದಿರುವ ಮಾನ್ಯತೆಗಳನ್ನು ಪರಿಗಣಿಸಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರಾಯೋಜಿಸುವ ವಿವಿಧ ಕೌಶಲ್ಯಾಭಿವೃದ್ಧಿ ಯೋಜನೆಗಳಡಿ ಅನುದಾನ ಹಾಗೂ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಪ್ರಸ್ತಾವನೆಗಳನ್ನು ಸಲ್ಲಿಸಲು ವಿಶ್ವವಿದ್ಯಾಲಯ ಉದ್ದೇಶಿಸಿದೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಕೆಳಕಂಡ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳಡಿ ಪ್ರಸ್ತಾವನೆಗಳನ್ನು ಸಲ್ಲಿಸಲು ಉದ್ದೇಶಿಸಿದೆ.

## ಅ. ಭಾರತ ಸರ್ಕಾರದ ಯೋಜನೆಗಳು

1. ಪಿಎಂ ವಿಶ್ವಕರ್ಮ (PM Vishwakarma) – ಸುಮಾರು 2 ಲಕ್ಷ ಫಲಾನುಭವಿಗಳಿಗೆ ಕೌಶಲ್ಯ ತರಬೇತಿ ಕಾರ್ಯಕ್ರಮಗಳು.
2. ಸ್ಕಿಲ್ ಇಂಡಿಯಾ ಮಿಷನ್ – ಪ್ರಧಾನ ಮಂತ್ರಿ ಕೌಶಲ ಕೇಂದ್ರ (Pradhan Mantri Kaushal Kendra – PMKK).
3. ರೈಸಿಂಗ್ ಅಂಡ್ ಅಕ್ಸಿಲರೇಟಿಂಗ್ ಎಂಎಸ್‌ಎಂಇ ಪರ್ಫಾರ್ಮೆನ್ಸ್ (Raising and Accelerating MSME Performance - RAMP) – ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವಾಲಯ (MSME) ವತಿಯಿಂದ.

## ಆ. ಕರ್ನಾಟಕ ಸರ್ಕಾರದ ಯೋಜನೆಗಳು

I. ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ (Karnataka Skill Development Corporation - KSDC)

- ವೃತ್ತಿಪರ ತರಬೇತಿ (Vocational Training).
- ಇಂಡಸ್ಟ್ರಿ ಲಿಂಕೇಜ್ ಸೆಲ್ 2.0 (Industry Linkage Cell 2.0).
- ಕಲಿಕೆ ಜೊತೆಗೆ ಕೌಶಲ್ಯ (Kalike Jothege Kaushalya).

II. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ (Karnataka Minorities Development Corporation Limited - KMDCL)

- ಫ್ಯೂಚರ್ ಸ್ಕಿಲ್ಸ್ (Future Skills) – ಕೃತಕ ಬುದ್ಧಿಮತ್ತೆ (AI), ಯಂತ್ರ ಕಲಿಕೆ (ML), ಕ್ಲೌಡ್ ಕಂಪ್ಯೂಟಿಂಗ್, ವೆಬ್ ಡಿಸೈನಿಂಗ್, ಸೈಬರ್ ಭದ್ರತೆ ಮುಂತಾದ ಕ್ಷೇತ್ರಗಳಲ್ಲಿ.
- ಸೋಲಾರ್ ಎಂಪಾನೆಲ್‌ಮೆಂಟ್ ತರಬೇತಿ (Solar Empanelment Training).

III. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ

- ಕ್ಯಾಂಪಸ್ ಟು ಕರಿಯರ್ (Campus to Career) ಕಾರ್ಯಕ್ರಮ (ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕ್ ಸಹಯೋಗದೊಂದಿಗೆ).
- ಸಾಫ್ಟ್ ಸ್ಕಿಲ್ಸ್ ಮತ್ತು ಜಾಬ್ ಸ್ಕಿಲ್ಸ್ ಕಾರ್ಯಕ್ರಮಗಳು.

ವಿಶ್ವವಿದ್ಯಾಲಯವು ಈ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯವಿರುವ ಮೂಲಸೌಕರ್ಯ, ಅನುಭವಿ ಬೋಧಕ ಮತ್ತು ಆಡಳಿತ ಸಿಬ್ಬಂದಿ, ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಪ್ರಾದೇಶಿಕ ಕೇಂದ್ರಗಳ ಕಟ್ಟಡಗಳು ಹಾಗೂ ಇತರೆ ಸಂಪನ್ಮೂಲಗಳನ್ನು ಹೊಂದಿದೆ. ಆದ್ದರಿಂದ, ಈ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ (Ministry of Skill Development and Entrepreneurship), ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವಾಲಯ (Ministry of MSME) ಸೇರಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳು ಮತ್ತು ಇತರೆ ಅನುದಾನ ನೀಡುವ ಸಂಸ್ಥೆಗಳು ಪ್ರಾಯೋಜಿಸುವ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳಡಿ ಪ್ರಸ್ತಾವನೆಗಳನ್ನು ಸಲ್ಲಿಸಲು ಹಾಗೂ ಅನುದಾನವನ್ನು ಪಡೆಯಲು ವಿಶ್ವವಿದ್ಯಾಲಯ ಕ್ರಮ ಕೈಗೊಳ್ಳಲಿದೆ.

ಈ ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಸಂಬಂಧಿತ ಸರ್ಕಾರ, ಅನುದಾನ ನೀಡುವ ಸಂಸ್ಥೆಗಳು ಹಾಗೂ ನಿಯಂತ್ರಣ ಸಂಸ್ಥೆಗಳು ನಿಗದಿಪಡಿಸಿರುವ ಎಲ್ಲಾ ನಿಯಮಗಳು, ಮಾರ್ಗಸೂಚಿಗಳು ಹಾಗೂ ಹಣಕಾಸು ನಿಯಮಗಳನ್ನು ವಿಶ್ವವಿದ್ಯಾಲಯ ಕಟ್ಟುನಿಟ್ಟಾಗಿ ಪಾಲಿಸಲಿದೆ.

ಅದೇ ರೀತಿ, ಮೇಲ್ಕಂಡ ಯೋಜನೆಗಳು ಮಂಜೂರಾದಲ್ಲಿ, ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ ಸಂಬಂಧಿತ ಸರ್ಕಾರದ ಇಲಾಖೆ, ನಿಗಮ, ಸಂಸ್ಥೆಗಳು ಹಾಗೂ ಅನುದಾನ ನೀಡುವ ಏಜೆನ್ಸಿಗಳೊಂದಿಗೆ ಅಗತ್ಯವಿರುವ ತಿಳುವಳಿಕಾ ಒಪ್ಪಂದಗಳು (MoUs) ಹಾಗೂ ಇತರೆ ಒಪ್ಪಂದಗಳನ್ನು ಮಾಡಿಕೊಳ್ಳಲು ವಿಶ್ವವಿದ್ಯಾಲಯ ಕ್ರಮ ಕೈಗೊಳ್ಳಲಿದೆ.

**ಆದ್ದರಿಂದ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಕೌಶಲ್ಯಾಭಿವೃದ್ಧಿ ಯೋಜನೆಗಳಡಿ ಪ್ರಸ್ತಾವನೆಗಳನ್ನು ಸಲ್ಲಿಸಲು ಹಾಗೂ ಸಂಬಂಧಿತ ನಿಯಮಗಳಿಗೆ ಒಳಪಟ್ಟು ಅಗತ್ಯ ಕ್ರಮಗಳನ್ನು ಕೈಗೊಳ್ಳಲು, ಅದರಲ್ಲೂ ಸಂಬಂಧಿತ ಸಂಸ್ಥೆಗಳೊಂದಿಗೆ ತಿಳುವಳಿಕಾ ಒಪ್ಪಂದಗಳನ್ನು ಮಾಡಿಕೊಳ್ಳಲು, ಮೇಲ್ಕಂಡ ವಿಷಯವನ್ನು ಪರಿಶೀಲನೆ, ಚರ್ಚೆ ಹಾಗೂ ಅನುಮೋದನೆಗಾಗಿ ಶೈಕ್ಷಣಿಕ ಮಂಡಳಿಯ ಮುಂದೆ ಮಂಡಿಸಲಾಗಿದೆ.**

**ಚರ್ಚೆ**

ಮಾನ್ಯ ಕುಲಪತಿಗಳು ಮಾತನಾಡಿ ತಾವು ಇತ್ತೀಚಿಗೆ ಪ್ರಾದೇಶಿಕ ಕೇಂದ್ರಗಳಿಗೆ ಭೇಟಿ ನೀಡಿದ್ದು ನಮ್ಮ ಪ್ರಾದೇಶಿಕ ಕೇಂದ್ರಗಳು ಬಹಳ ಉತ್ತಮವಾಗಿದ್ದು ಅವುಗಳನ್ನು ಸದ್ಬಳಕೆ ಮಾಡಿಕೊಳ್ಳುವುದು ಬಹಳ ಅವಶ್ಯವಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಭವಿಷ್ಯದ ಅನುಕೂಲದ ದೃಷ್ಟಿಯಿಂದ NSDC ಮತ್ತು NCVET ನೀಡುವಂತ ಆತ್ಯಾಧುನಿಕ ತಂತ್ರಜ್ಞಾನಾಧಾರಿತ ಕೌಶಲ್ಯಾಧಾರಿತ ಕೋರ್ಸ್‌ಗಳನ್ನು ಪ್ರಾರಂಭಿಸಿದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನುದಾನಗಳು ಬಿಡುಗಡೆಯಾಗುತ್ತದೆ ಎಂದು ವಿವರಿಸಿದರು.

ಮುಂದುವರೆದು, ಯಾದಗಿರಿ ಮತ್ತು ಹಾಸನ ಪ್ರಾದೇಶಿಕ ಕೇಂದ್ರದಗಳು NSDC ಮತ್ತು NCVET ನೀಡುವಂತ ಆತ್ಯಾಧುನಿಕ ತಂತ್ರಜ್ಞಾನಾಧಾರಿತ ಕೌಶಲ್ಯಾಧಾರಿತ ಕೋರ್ಸ್‌ಗಳಾದ Solar, Drawn ಗಳನ್ನು ಮೊದಲಿಗೆ ಪ್ರಾರಂಭಿಸಲು ಬಳಸಿಕೊಳ್ಳುವ ಬಗ್ಗೆ ಚಿಂತಿಸಲಾಗಿರುವುದಾಗಿ ತಿಳಿಸಿದರು. NSDC ಮತ್ತು NCVET ನ ಕೋರ್ಸ್‌ಗಳನ್ನು ನಡೆಸಲು ಹೊರಗುತ್ತಿಗೆ ನಿಡುವುದು ಇದಕ್ಕೆ ಸಂಬಂಧಿಸಿದಂತೆ ಕಟ್ಟಡ ವ್ಯವಸ್ಥೆ ಮಾಡುವುದರೊಂದಿಗೆ ಅಂಕಪಟ್ಟಿಯನ್ನು ವಿಶ್ವವಿದ್ಯಾನಿಲಯದ ವತಿಯಿಂದ ನೀಡುವುದು. ಕೋರ್ಸ್‌ಗಳನ್ನು ನಡೆಸುವ ಹೊರಗುತ್ತಿಗೆಯವರಿಗೆ ಸರ್ಕಾರದಿಂದಲೇ ಪ್ರತಿ ವಿದ್ಯಾರ್ಥಿಗೆ ರೂ.8000/- ಗಳನ್ನು ನೀಡುತ್ತದೆ. ಈ ರೀತಿ ನೀಡುವ ಮೊತ್ತದಲ್ಲಿ ವಿಶ್ವವಿದ್ಯಾನಿಲಯಕ್ಕೂ Share ಪಡೆದಲ್ಲಿ ವಿಶ್ವವಿದ್ಯಾನಿಲಯಕ್ಕೆ ಆಧಾಯವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ತೀರ್ಮಾನ: ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕೌಶಲ್ಯಭಿವೃದ್ಧಿ ಯೋಜನೆಗಳು / ಕಾರ್ಯಕ್ರಮಗಳಡಿ ಪ್ರಸ್ತಾವನೆಗಳನ್ನು ಸಲ್ಲಿಸಲು ಹಾಗೂ ಸಂಬಂಧಿತ ನಿಯಮಗಳಿಗೆ ಒಳಪಟ್ಟು ಅಗತ್ಯ ಕ್ರಮಗಳನ್ನು ಕೈಗೊಳ್ಳಲು, ಸಂಬಂಧಿತ ಸಂಸ್ಥೆಗಳೊಂದಿಗೆ ತಿಳುವಳಿಕಾ ಒಪ್ಪಂದಗಳನ್ನು ಮಾಡಿಕೊಳ್ಳಲು ಅನುಮೋದನೆ ನೀಡಿಲಾಯಿತು.**

*****

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 41.18**

ವಿಷಯ: ಸಮಾಜಕಾರ್ಯ ಸ್ನಾತಕ ಕಾರ್ಯಕ್ರಮದ (BSW) ಅಂಕಪಟ್ಟಿಗಳಲ್ಲಿ ಅಂಕಗಳನ್ನು ನಿಗದಿಪಡಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 17.07.2020,

******

ವಿಶ್ವವಿದ್ಯಾನಿಲಯದಲ್ಲಿ ಸಮಾಜಕಾರ್ಯ ಸ್ನಾತಕ ಕಾರ್ಯಕ್ರಮ(BSW)ವನ್ನು ಹೊಸದಾಗಿ ಅಳವಡಿಸಿಕೊಳ್ಳಲಾಗಿದ್ದು, ಈ ಕಾರ್ಯಕ್ರಮಗಳಲ್ಲಿ ಕಂತರಿಕ ನಿಬಂಧನೆಗಳಿಗೆ 30 ಅಂಕಗಳು ಮತ್ತು ಮುಖ್ಯ ಪರೀಕ್ಷೆಗೆ 70 ಅಂಕಗಳನ್ನು ನಿಗದಿಪಡಿಸಲಾಗಿದ್ದು, ಪಠ್ಯಕ್ರಮಾನುಸಾರ ಅಂತರಿಕ ನಿಬಂಧನೆಯ 30 ಅಂಕಗಳಿಗೆ ಕನಿಷ್ಠ 2 ಅಂಕಗಳು, ಮುಖ್ಯ ಪರೀಕ್ಷೆಯ 70 ಅಂಕಗಳಿಗೆ ಕನಿಷ್ಠ 28 ಅಂಕಗಳನ್ನು ನಿಗರಿಪಡಿಸುವಂತೆ ವಿಭಾಗದ ಮುಖ್ಯಸ್ಥರು ತಿಳಿಸಿದ್ದು, ಸದರಿ ಕಾರ್ಯಕ್ರಮದ ವಿವರಣಾ ಪುಸ್ತಕದಲ್ಲಿ ಮುಖ್ಯ ಪರೀಕ್ಷೆಯ 70 ಅಂಕಗಳಿಗೆ ಕನಿಷ್ಠ 32 ಅಂಕಗಳು ಎಂದು ನಮೂದಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಯಾವ ಕನಿಷ್ಠ ಅಂಕಗಳನ್ನು ಪರಿಗಣಿಸಿ ಅಂಕಪಟ್ಟಿಯ ಮಾದರಿಯನ್ನು (Template) ಅನ್ನು ಅಂತಿಮಗೊಳಿಸಬೇಕು ಎಂಬುದರ ಬಗ್ಗೆ ವಿಭಾಗದ ಮುಖ್ಯಸ್ಥರು ಮಾನ್ಯ ಡೀನ್ ಶೈಕ್ಷಣಿಕ)ರವರಲ್ಲಿ ವವರಣೆಯನ್ನು ಕೋರಲಾಗಿ, ಶೇಕಡಾವಾರು ಅಂಕಗಳನ್ನು ಪರಿಗಣಿಸಿ ಅಂತಿಮವಾಗಿ ಮುಖ್ಯ ಪರೀಕ್ಷೆಯ 70 ಅಂಕಗಳಿಗೆ ಕನಿಷ್ಠ 20 ಅಂಕಗಳನ್ನು ನಿಗದಿಪಡಿಸಬೇಕು ಎಂಬುದಕ್ಕೆ ಮಾನ್ಯ ಡೀನ್ (ಶೈಕ್ಷಣಿಕ)ರವರು ಒಪ್ಪಿಗೆ ನೀಡಿ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಗೆ ಮಂಡಿಸಲು ತಿಳಿಸಿರುವುದರಿಂದ ಹಾಗೂ ಮಾನ್ಯ ಕುಲಪತಿಯವರು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ: ಸಮಾಜಕಾರ್ಯ ಸ್ನಾತಕ ಕಾರ್ಯಕ್ರಮದ (BSW) ಅಂಕಪಟ್ಟಿಗಳಲ್ಲಿ ಮುಖ್ಯ ಪರೀಕ್ಷೆಯ 80 ಅಂಕಗಳಿಗೆ ಕನಿಷ್ಠ 20 ಅಂಕಗಳನ್ನು ನಿಗದಿಪಡಿಸಲು ತೀರ್ಮಾನಿಸಲಾಯಿತು.**

*****

**ವಿಷಯ ಸಂಖ್ಯೆ: 41.19**

**Programs on Statistics and Data Analysis**

The following PG and PG (Diploma) Programs may be introduced at KSOU from the Academic year 2027-28

1. M.Sc Statistics and Data Analytics
2. PG (Diploma) in Statistics and Data Science with Pythan

ಕುಲಸಚಿವರು

ಕುಲಪತಿಗಳು

ಚರ್ಚೆ

**Statistics and Data Analysis** ವಿಷಯಕ್ಕೆ ಪ್ರಸ್ತುತ ಬಹಳಷ್ಟು ಬೇಡಿಕೆ ಇದ್ದು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಈ ಕೋರ್ಸ್‌ಗಳನ್ನು ಪ್ರಾರಂಭಿಸಿದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದರೊಂದಿಗೆ ವಿಶ್ವವಿದ್ಯಾನಿಲಯಕ್ಕೂ ಅನುಕೂಲವಾಗುವುದೆಂದು ಮಾನ್ಯ ಕುಲಪತಿಗಳು ತಿಳಿಸಿದರು.

**ತೀರ್ಮಾನ:** ನಿಯಮಾನುಸಾರ ವಿಶ್ವವಿದ್ಯಾನಿಲಯದಲ್ಲಿ **Statistics and Data Analysis** ವಿಭಾಗವನ್ನು ತೆರೆದು **Statistics and Data Analysis** ಅದರ ಅಡಿಯಲ್ಲಿ M.Sc Statistics and Data Analytics **ಮತ್ತು** PG (Diploma) in Statistics and Data Science with Python Programs **ಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಲಾಯಿತು.**

*****

ಅಂತಿಮವಾಗಿ ಡೀನ್ (ಶೈಕ್ಷಣಿಕ) ರವರು 41ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಆಗಮಿಸಿ, ಮಂಡಿತ ವಿಷಯದ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟ ಸಭೆಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಡೀನ್ (ಶೈಕ್ಷಣಿಕ) ರವರು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು